CC-O. In Public Domain. Digitized by eGangotri

ಶಿಕ್ಷಣ ತಪಸ್ವಿ

Sri Vidyabharathi Book Centre, Sringeri

CC-O. In Public Domain. Digitized by eGangotri

Sri Vidyabharathi Book Centre, Sringeri

CC-O. In Public Domain. Digitized by eGangotri



ಶ್ರೀ ಯು. ವಾಸುದೇವ ಜೋಗಪ್ಪ ಶೆಣೈಯವರ ಮನೆತನದ ಪ್ರಧಾನ ದೇವರಾದ
ಶ್ರೀ ವಿಠಲ ರುಖುಮಾಯಿ ದೇವರು.

Sri Vidyabharathi Book Centre, Sringeri

CC-O. In Public Domain. Digitized by eGangotri

17-4-1896 21-12-1976

Late U. Pundalik Shenoy



2-8-1928 10-2-1994

Late U. Panduranga V. Shenoy

Founder

Sri U. Pundalik Shenoy Memorial Trust

Sri Vidyabharathi Book Centre, Sringeri

CC-O. In Public Domain. Digitized by eGangotri



Sri Vidyabharathi Book Centre, Sringeri

ದಿ। ಶ್ರೀ ಯು. ಪುಂಡಲೀಕ ಶೆಣೈ

CC-O. In Public Domain. Digitized by eGangotri

I am a Teacher (Archaka)
School is my Temple (Devalaya)
Book is my God (Goddess Saraswati)
Teaching is my Worship (Aradhana)
Student's achievements is my Reward (Prasadam)

– Sri U. Pundalik Shenoy

The Mediocre teacher tells,
The Good teacher explains,
The Superior teacher demonstrates,
The Great Teacher Inspires.

– W. A. Wart

ದಾನ – ಉತ್ತಮ
ವಿದ್ಯಾದಾನ – ಅತೀ ಉತ್ತಮ
ಉಚಿತ ವಿದ್ಯಾದಾನ – ಉತ್ತಮೋತ್ತಮ

– ಶ್ರೀ ಯು. ಪುಂಡಲೀಕ ಶೆಣೈ

Sri Vidyabharathi Book Centre, Sringeri

CC-O. In Public Domain. Digitized by eGangotri

ಶ್ರೀ ಯು. ಪುಂಡಲೀಕ ಶೆಣೈ – ಜೀವನ ವೃತ್ತಾಂತ

17-4-1896	ಜನನ.
1915	S.S.L.C. ಮುಕ್ತಾಯ.
1920	B.A., L.T. ಪದವಿ ಪ್ರಾಪ್ತಿ.
	ಅಧ್ಯಾಪಕ, ನೆಹರು ಹೈಸ್ಕೂಲ್, ಅಲೆವೂರು.
1921–24	ಅಧ್ಯಾಪಕ, ಮಂಗಳೂರು ಮಿಷನ್ ಸ್ಕೂಲ್, ಮಂಗಳೂರು.
6-6-1924 –31-5-1951	ಅಧ್ಯಾಪಕ, ಕ್ರಿಶ್ಚಿಯನ್ ಹೈಸ್ಕೂಲ್, ಉಡುಪಿ.
26-12-1942	Diploma of Fellowship Award – ಎಕಾಡೆಮಿ ಆಫ್ ಜನರಲ್ ಎಜುಕೇಶನ್, ಮಣಿಪಾಲ – ಇವರಿಂದ ಪ್ರಧಾನ.
1947 – 1976	ನಿರ್ದೇಶಕ, ಶ್ರೀ ರಾಮಕೃಷ್ಣ ಥಿಯೇಟರ್, ಉಡುಪಿ.
1951–1956	ಮುಖ್ಯೋಪಾಧ್ಯಾಯ, ಮಣಿಪಾಲ ಹೈಸ್ಕೂಲ್, ಮಣಿಪಾಲ.
1956	ಉದ್ಯೋಗದಿಂದ ನಿವೃತ್ತಿ.
4-12-1957 – 1976	Trustee, M.I.T. Trust, Manipal.
1962	'New Year Award', ಎಕಾಡೆಮಿ ಆಫ್ ಜನರಲ್ ಎಜ್ಯುಕೇಶನ್, ಸಿಂಡಿಕೇಟ್ ಬ್ಯಾಂಕ್ ಮತ್ತು ರೋಟರಿ ಕ್ಲಬ್, ಉಡುಪಿ – ಮಣಿಪಾಲ ಮತಿಯಿಂದ.
1968–1976	ಉಪಾಧ್ಯಕ್ಷ, ರಂಗಭೂಮಿ (ರಿ.), ಉಡುಪಿ.
1961 – 1976	ಸದಸ್ಯ, ಕಾರ್ಯಕಾರಿ ಸಮಿತಿ, ಮಣಿಪಾಲ ಎಕಾಡೆಮಿ ಆಫ್ ಜನರಲ್ ಎಜುಕೇಶನ್.
1962 – 1976	ಸಂಗೀತ ಸಭಾ, ಉಡುಪಿ
28-11-1967	"Poor Students' Benefit Fund Trust"ನ ಸ್ಥಾಪನೆ (ಮಾನ್ಯ ಶ್ರೀ ಟಿ.ಎ.ಪೈ ಹಾಗೂ ಶ್ರೀ ಎ. ಜೆ. ಅಲ್ಲೆಯವರ ಜೊತೆಯಲ್ಲಿ).
1975	ಸ್ವಯಂ ಸ್ಥಾಪಿತ ''ಸೇವಾ ಸಮಾಜ'' (Book Bank) ಉಡುಪಿಯ ಶ್ರೀ ಲಕ್ಷ್ಮೀ ವೆಂಕಟೇಶ ದೇವಸ್ಥಾನದ ಗೌಡಸಾರಸ್ವತ ಬ್ರಾಹ್ಮಣ ಯುವಕ ಮಂಡಳಿಯವರಿಗೆ ಹಸ್ತಾಂತರ.
21-12-1976	ನಿಧನ.

(ಕಾರ್ಯದರ್ಶಿ, ಕ್ರಿಶ್ಚಿಯನ್ ಹೈಸ್ಕೂಲ್ ಬೆನಿಫಿಟ್ ಟ್ರಸ್ಟ್ ಫಂಡ್, ಉಡುಪಿ ಹಾಗೂ ಇನ್ನಿತರ ಅನೇಕ ಸಂಸ್ಥೆಗಳಲ್ಲಿ ಸೇವೆ ಸಲ್ಲಿಸಿದ್ದರು)

CC-O. Vidyaprapoorna Book Centre, Udupi. Digitized by eGangotri

CC-O. In Public Domain. Digitized by eGangotri

''ಶಿಕ್ಷಣ ತಪಸ್ವಿ''

ಸಂಚಿಕೆ ಬಿಡುಗಡೆ : 13-1-2002 (ರವಿವಾರ)

ಉದ್ಘಾಟಕರು : ಡಾ। ಟಿ. ರಾಮದಾಸ್ ಎಂ. ಪೈ
ಅಧ್ಯಕ್ಷರು, ಮಾಹೆ, ಮಣಿಪಾಲ

ಉದ್ದೇಶ : ದಿ। ಯು. ಪುಂಡಲೀಕ ಶೆಣೈಯವರ
ಪುಣ್ಯತಿಥಿಯ 25 ವರ್ಷ ಪೂರ್ಣಗೊಂಡ
ದಿವ್ಯಸ್ಮರಣಾರ್ಥ

ಸ್ಥಳ : ''ವಾಸುದೇವ ಸದನ''
ಶ್ರೀ ವೆಂಕಟರಮಣ ದೇವಸ್ಥಾನ ರಸ್ತೆ, ಉಡುಪಿ

ಹಕ್ಕುಗಳು ಕಾದಿರಿಸಲಾಗಿದೆ

ಛಾಯಾಚಿತ್ರಗಳು : ಐಡಿಯಲ್ ಸ್ಟುಡಿಯೋ, ಉಡುಪಿ

ಮುಖಪುಟ : ಶ್ರೀ ರಾಮಚಂದ್ರ ಭಟ್, ಬಿಳಗಿ

ಮುದ್ರಕರು : ಮಣಿಪಾಲ ಪ್ರೆಸ್ ಲಿಮಿಟೆಡ್, ಮಣಿಪಾಲ

ಸಂಪಾದಕರು/ಪ್ರಕಾಶಕರು : ಶ್ರೀ ಯು. ಪುಂಡಲೀಕ ಶೆಣೈ ಮೆಮೋರಿಯಲ್ ಟ್ರಸ್ಟ್
ಒಂದನೇ ಮಹಡಿ, ''ವಾಸುದೇವ ಸದನ''
ಶ್ರೀ ವೆಂಕಟರಮಣ ದೇವಸ್ಥಾನ ರಸ್ತೆ
ಉಡುಪಿ – 576 101

Sri Vidyabharathi Book Centre, Sringeri

CC-O. In Public Domain. Digitized by eGangotri

ಅನುಕ್ರಮಣಿಕೆ

ನಂಬ್ರ	ವಿವರಣೆ	ಲೇಖಕರು	ಪುಟ ಸಂಖ್ಯೆ
1.	Sri U. Pundalik Shenoy	*Sri M. V. Kamath*	13
2.	ಮಹಾತಪಸ್ವಿ ಯು. ಪುಂಡಲೀಕ ಶೆಣೈ	*ದಿ। ಡಾ। ಪ. ನಾರಾಯಣ ರಾವ್*	17
3.	ಶ್ರೀ ಯು. ಪಿ. ಶೆಣೈ – ಒಂದು ಸ್ಮರಣೆ	*ಪ್ರೊ। ಉ. ಲ. ಆಚಾರ್ಯ*	27
4.	ನನ್ನ ಬದುಕಿನಲ್ಲಿ ಮರೆಯಲಾಗದ ಆನನ್ಯ ರಂಗಪ್ರೇಮಿ – ದಿ। ಯು. ಪುಂಡಲೀಕ ಶೆಣೈ	*ಶ್ರೀ ಕೆ. ಆನಂದ ಗಾಣಿಗ*	31
5.	ಶ್ರೀ ಯು. ಪುಂಡಲೀಕ ಶೆಣೈ	*ವಿದ್ಯಾವಾಚಸ್ಪತಿ ಶ್ರೀ ಬನ್ನಂಜೆ ಗೋವಿಂದ ಆಚಾರ್ಯ*	43
6.	ಪುಂಡಲೀಕ ಶೆಣೈ ಸಂಗೀತ ಸಭಾದ ಒಡನಾಟದಲ್ಲಿ	*ಶ್ರೀ ಟಿ. ರಂಗ ಪೈ*	47
7.	ಸೇವಾ ಧರ್ಮ	*ಡಾ। ಎಚ್. ವಿ. ನರಸಿಂಹಮೂರ್ತಿ*	53

Sri Vidyabharathi Book Centre, Sringeri

Academy of General Education

Diploma of Fellowship

(Rule 2b—1)

The Supreme Governing Body of the Academy of General Education hereby makes known that

U. Purnalila Bhat

has been enrolled as a Fellow of the Academy, he having been certified by the Administrative Committee as eligible for the same.

Given under the seal of the Academy this the 26th day of December 1962

Academy House,
MANIPAL, S. INDIA
26th December 1962

ACADEMY OF GENERAL EDUCATION

Registrar

Sri Vidyabharathi Book Centre, Sringeri

CC-O. In Public Domain. Digitized by eGangotri

CC-O. In Public Domain. Digitized by eGangotri

ಮುನ್ನುಡಿ

17-4-1896ರಲ್ಲಿ ಜನಿಸಿದ ಶ್ರೀಯುತ ಪುಂಡಲೀಕ ಶೆಣೈಯವರು ಸ್ವರ್ಗಸ್ಥರಾಗಿ ಇಂದಿಗೆ 25 ವರ್ಷಗಳು ಪೂರ್ಣಗೊಳ್ಳುತ್ತವೆ. ಉಡುಪಿಯ ಪ್ರಸಿದ್ಧ ಮನೆತನದ ಶ್ರೀ ಯು. ಜೋಗಪ್ಪ ಶೆಣೈಯವರ ಮಗನಾಗಿ ಹುಟ್ಟಿ ಅವರು ತಮ್ಮ ವಿದ್ಯಾಭ್ಯಾಸವನ್ನು ಆರಂಭದಲ್ಲಿ ಉಡುಪಿಯ ಬೋರ್ಡ್ ಮಿಡ್ಲ್ ಸ್ಕೂಲ್‌ನಲ್ಲೂ, ಆನಂತರ ಉಡುಪಿಯ ಕ್ರಿಶ್ಚಿಯನ್ ಹೈಸ್ಕೂಲಿನಲ್ಲೂ ಓದಿ ಮುಗಿಸಿದರು. 1915ರ S.S.L.C.ಯ ಪ್ರಥಮ ತಂಡದ ಪಬ್ಲಿಕ್ ಪರೀಕ್ಷೆಯಲ್ಲಿ ಅತ್ಯುತ್ತಮ ಅಂಕ ಗಳಿಸಿ ತೇರ್ಗಡೆಯಾದರು. ಆನಂತರ ಬಿ.ಎ. ಡಿಗ್ರಿ ಗಳಿಸಿ ಮದ್ರಾಸ್‌ನಲ್ಲಿ ಎಲ್.ಟಿ. ಪದವಿಯನ್ನು ಪಡೆದರು.

ವಿದ್ಯಾಭ್ಯಾಸ ಮುಕ್ತಾಯವಾದಂತೆ, ಶಿಕ್ಷಣ ವೃತ್ತಿಯಲ್ಲಿ ಆತುರರಾಗಿದ್ದುದರಿಂದ ಅವರು ಪ್ರಪ್ರಥಮವಾಗಿ ಅಲೆವೂರಿನ ಶ್ರೀ ನೆಹರು ಹೈಸ್ಕೂಲ್‌ನಲ್ಲಿ, ಆನಂತರ 1921–24ರ ಅವಧಿಯಲ್ಲಿ ಮಂಗಳೂರು ಮಿಷನ್ ಸ್ಕೂಲಿನಲ್ಲಿ ಆ ಬಳಿಕ 1924 – 1951ರ ವರೆಗೆ ಉಡುಪಿಯ ಕ್ರಿಶ್ಚಿಯನ್ ಹೈಸ್ಕೂಲಿನಲ್ಲಿ ಅಧ್ಯಾಪಕರಾಗಿ ಹಾಗೂ 1951 – 1956ರ ವರೆಗೆ ಮಣಿಪಾಲ ಹೈಸ್ಕೂಲಿನಲ್ಲಿ ಮುಖ್ಯೋಪಾಧ್ಯಾಯರಾಗಿ ಸೇವೆ ಸಲ್ಲಿಸಿದರು. 1956ರಲ್ಲಿ ಉದ್ಯೋಗದಲ್ಲಿ ನಿವೃತ್ತಿ ಹೊಂದಿದರೂ ಸ್ವಯಂ ನಿವೃತ್ತಿ ಹೊಂದದೆ, ಬೆಳಗ್ಗೆ 6 ಗಂಟೆಯಿಂದ ರಾತ್ರಿ 8 ಗಂಟೆಯ ತನಕ ಜಾತಿ, ಮತ ಬೇಧವಿಲ್ಲದೆ ಎಲ್ಲಾ ವಿದ್ಯಾರ್ಥಿಗಳಿಗೆ ಉಚಿತವಾಗಿ ತಮ್ಮ ಮನೆಯಲ್ಲಿಯೇ ವಿದ್ಯಾದಾನ ಮಾಡುತ್ತ ಜೀವಿತವನ್ನು ಕಳೆದು ತಾರೀಖು 21-12-1976ರಂದು ಸಾಯಂಕಾಲ 8.05ಕ್ಕೆ ಇಹಲೋಕವನ್ನು ತ್ಯಜಿಸಿದರು.

ನಿಸ್ವಾರ್ಥತೆ, ಸರಳತೆ, ಪ್ರಾಮಾಣಿಕತೆ, ನಿಸ್ಪೃಹತೆ – ಇವೆಲ್ಲ ಸದ್ಗುಣಗಳನ್ನು ತನ್ನಲ್ಲಿ ತುಂಬಿಸಿಕೊಂಡು ತನ್ನ ಕೊನೆಯುಸಿರಿನ ತನಕ ಸಹಸ್ರಾರು ವಿದ್ಯಾರ್ಥಿಗಳಿಗೆ ಉಚಿತವಾಗಿ ವಿದ್ಯಾದಾನವನ್ನು ಮಾಡುತ್ತಾ ನಿರ್ಭೀತಿಯಿಂದಲೂ ನೆಮ್ಮದಿಯಿಂದಲೂ 80 ವರ್ಷಗಳ ಪರ್ಯಂತ ಸಾರ್ಥಕ ಜೀವನವನ್ನು ಜೀವಿಸಿ ಕೊನೆಯ ತನಕ ಯಾರ ಋಣಕ್ಕೂ ಬೀಳದೆ ಲೀಲಾಜಾಲವಾಗಿ ತಮ್ಮ ಜೀವಿತಕ್ಕೆ ಮಂಗಳವನ್ನು ಹಾಡಿದರು.

ದಿ। ಶೆಣೈಯವರ ಗುಣಗಾನ ಮಾಡಿ, ಅವರ ಜೀವನ ಮೌಲ್ಯಗಳನ್ನು ನಮ್ಮ ಜೀವನದಲ್ಲಿ ಅಳವಡಿಸಿಕೊಂಡರೆ ನಮ್ಮ ಬಾಳು ಸಾರ್ಥಕವಾದೀತೆಂಬ

Sri Vidyabharathi Book Centre, Sringeri

CC-O. In Public Domain. Digitized by eGangotri

ಹಿರಿದಾಸೆಯನ್ನು ಮನಸ್ಸಿನಲ್ಲಿ ಇಟ್ಟುಕೊಂಡು ಈ ಸುಸಂದರ್ಭದಲ್ಲಿ ಅವರ ಶಿಷ್ಯ ವೃಂದದವರು, ಬಂಧುಗಳು, ಅಭಿಮಾನಿಗಳು ವ್ಯಕ್ತಪಡಿಸಿದ ಅನಿಸಿಕೆಗಳನ್ನು ಕ್ರೋಢೀಕರಿಸಿ ಈ ಹಿಂದೆ (ತಾ. 25-12-2000ರಂದು) 'ವಿದ್ಯಾರಾಧಕ'ವೆಂಬ ಕಿರುಹೊತ್ತಗೆಯನ್ನು ಹೊರ ತಂದಿದ್ದೆವು. ಅನೇಕರು ಅದನ್ನು ಓದಿ ತಮ್ಮ ಮೆಚ್ಚುಗೆಯನ್ನು ವ್ಯಕ್ತಪಡಿಸಿದ್ದಾರೆ ಮತ್ತೆ ಹಲವರು ತಾವೂ ದಿ। ಶೆಣ್ಯೈ ಯವರ ಬಗ್ಗೆ ಕೆಲವು ಮಾತುಗಳನ್ನು ಬರೆದು ನಮಗೆ ಕಳುಹಿಸಿದರು. ಇದರ ಫಲವಾಗಿ ಈ ಬಾರಿ ''ಶಿಕ್ಷಣ ತಪಸ್ವಿ'' ಎಂಬ ಕಿರುಹೊತ್ತಗೆಯನ್ನು ಸ್ಮರಣಿಕೆಯ ರೂಪದಲ್ಲಿ ಹೊರತರಲು ಸಾಧ್ಯವಾಗಿದೆ. ಅದಕ್ಕಾಗಿ ಆನಂದಪಡುತ್ತೇವೆ.

ದಿ। ಪುಂಡಲೀಕ ಶೆಣ್ಯೈಯವರ ಬಗ್ಗೆ ನಡೆಯುತ್ತಿರುವ ಸಮಾರಂಭಗಳು ಅವರ ಬಗ್ಗೆ ಹೊರಡಿಸಲಾಗುತ್ತಿರುವ ಇಂಥ ಪುಸ್ತಕಗಳು ಅವರಂಥ ದಿವ್ಯ ಆತ್ಮದ ನೆನಪನ್ನು ಅಚ್ಚಳಿಯದೆ ಉಳಿಸುತ್ತವೆ. ತನ್ಮೂಲಕ ಜನಮನದ ಭಾವನೆಯಲ್ಲಿ ಶುದ್ಧತೆ ಪ್ರಾಪ್ತವಾಗುತ್ತದೆ. ಇದು ಎಲ್ಲರಿಗೂ ಒಳ್ಳೆಯದು ಎಂಬ ಆಸೆಯಿಂದ ಈ ಕೆಲಸವನ್ನು ನಾವು ಮಾಡುತ್ತಿದ್ದೇವೆ.

ಲೇಖನಗಳನ್ನು ಕೊಟ್ಟು ಸಹಕರಿಸಿದ ಲೇಖಕರಿಗೆ, ಸಕಾಲದಲ್ಲಿ ಹಾಗೂ ಮನೋಹರವಾಗಿ ಮುದ್ರಿಸಿಕೊಟ್ಟ ಮಣಿಪಾಲ ಪ್ರೆಸ್ಸಿನವರಿಗೂ, ಪ್ರತ್ಯಕ್ಷವಾಗಿ – ಪರೋಕ್ಷವಾಗಿ ಸಹಕರಿಸಿದ ಇತರ ಅನೇಕ ಬಂಧು, ಅಭಿಮಾನಿ ವರ್ಗಕ್ಕೂ ಕೂಡಾ ಶ್ರೀ ಯು. ಪುಂಡಲೀಕ ಶೆಣ್ಯೈ ಮೆಮೋರಿಯಲ್ ಟ್ರಸ್ಟ್ ಆಭಾರ ಮನ್ನಣೆ ಸೂಚಿಸುತ್ತದೆ.

ಶ್ರೀ ಪರಮಾತ್ಮನು ನಮ್ಮೆಲ್ಲರಿಗೂ ಸನ್ಮಂಗಳವನ್ನುಂಟುಮಾಡಲೆಂದು ಅವನಲ್ಲಿ ಶಿರಬಾಗಿ ಬೇಡಿಕೊಳ್ಳುತ್ತೇವೆ.

3-11-2001 ಆಡಳಿತ ಮಂಡಳಿ

ಉಡುಪಿ ಶ್ರೀ ಯು. ಪುಂಡಲೀಕ ಶೆಣ್ಯೈ ಮೆಮೋರಿಯಲ್ ಟ್ರಸ್ಟ್

Sri Vidyabharathi Book Centre, Sringeri

ದಿ। ಯು. ಪುಂಡಲೀಕ ಶೆಣೈಯವರ ನಿಧನದ 25ನೇ ವರ್ಷದ ಸ್ಮೃತಿ (Death Anniversary) ಕಾರ್ಯಕ್ರಮವನ್ನು ''ವಾಸುದೇವ ಸದನ''ದಲ್ಲಿ ತಾ. 25-12-2000ದಂದು ಶ್ರೀ ಟಿ. ಮೋಹನದಾಸ ಪೈಯವರು ದೀಪವನ್ನು ಬೆಳಗಿಸಿ ಕಾರ್ಯಕ್ರಮವನ್ನು ಉದ್ಘಾಟಿಸುತ್ತಿರುವುದು. (ಚಿತ್ರದಲ್ಲಿ ಶ್ರೀ ಕೆ. ಕೆ. ಪೈ , ಶ್ರೀ ಎಂ. ಎಂ. ಕಿಣಿ, ಶ್ರೀ ಯು. ಹರೀಶ ಪಿ. ಶೆಣೈ , ಶ್ರೀ ಟಿ. ನಾರಾಯಣ ಎಂ. ಪೈ)

Sri Vidyabharathi Book Centre, Sirsi

CC-O. In Public Domain. Digitized by eGangotri



ದಿ। ಯು. ಪುಂಡಲೀಕ ಶೆಣೈಯವರ ನಿಧನದ 25ನೇ ವರ್ಷದ ಸ್ಮೃತಿ (ಸಂಸ್ಮರಣ) ಕಾರ್ಯಕ್ರಮದಲ್ಲಿ (25-12-2000), ಅವರ ಶಿಷ್ಯರು, ಗೆಳೆಯರು ಹಾಗೂ ಬಂಧುಗಳು ಬರೆದ ಲೇಖನಗಳನ್ನು ಒಳಗೊಂಡ ''ವಿದ್ಯಾರಾಧಕ'' ಸ್ಮರಣಿಕೆಯನ್ನು ಸಿಂಡಿಕೇಟ್ ಬ್ಯಾಂಕಿನ ಮಾಜಿ ಅಧ್ಯಕ್ಷರಾದ ಶ್ರೀ ಕೆ. ಕೆ. ಪೈಯವರು ಬಿಡುಗಡೆಗೊಳಿಸುತ್ತಿರುವುದು. (ಚಿತ್ರದಲ್ಲಿ ಎಡದಿಂದ ಶ್ರೀ ಎಂ. ಎಂ. ಕಿಣಿ, ಶ್ರೀ ಟಿ. ನಾರಾಯಣ ಎಂ. ಪೈ , ಶ್ರೀ ಯು. ಹರೀಶ ಪಿ. ಶೆಣೈಯವರನ್ನು ವೇದಿಕೆಯಲ್ಲಿ ಕಾಣಬಹುದು.)

Sri Vidyabharathi Book Centre, Sringeri

CC-O. In Public Domain. Digitized by eGangotri

CC-O. In Public Domain. Digitized by eGangotri

Sri U. Pundalika Shenoy

— Sri M. V. Kamath
Journalist, Mumbai

Though I have heard a great deal about Sri U. Pundalik Shenoy, I have, unfortunately, no personal memories of him. I knew him from a distance. The reason is that I gave up studies at the Christian High School, Udupi soon after I passed my II Form and was enrolled in Form III at the Board High School. That was in 1934. I therefore missed the honour and pleasure of being a student of Sri Shenoy.

But his dedication and commitment to teaching were passwords in my home. My two elder brothers studied under him. To speak of Pundlik Shenoy was like speaking about God — there was so much reverence and awe in mentioning just his name. He was considered as perhaps the best Mathematics Teacher the Christian High School ever had — barring of course, Pundlik Mam's own teacher Sri Srinivas Rao. Sri Srinivas Rao was expected to be named as Head Master when the post fell vacant, because of his seniority and because of his stature. But that was denied to him because Christian High School was run by the Basel Mission and the Mission could only appoint a Christian to the top post. It was because the public considered that an injustice had been done to Sri Rao that I and a few others were taken out of the Christian High School and enrolled in the 'secular' Board High School.

So I missed being taught by Sri Shenoy. But he was ever present in our thoughts. My family thought highly of him. What endeared Pundlik Mam was his simplicity, his concern for the poor, the needy and the less talented.

CC-O. In Public Domain. Digitized by eGangotri

Even in the thirties he was known for the tuitions he gave to poor students, free. He expected nothing but gave fully of himself. He was more than a Gandhian; he was the very embodiment of selfless service.

I think Dr. Sunder Ram Pai, long-time Chairman of the Corporation Bank, was his classmate. It was said that only in Dr. Pai's presence would Pundlik Mam relax and smile. The two got along well together.

From 1937 onwards—when I completed my SSLC examination—I almost became a stranger to Udupi, visiting it only during summer holidays. But Pundlik Mam's name would often crop up in conversations. He was a man of simple habits. His buttoned up jacket, his Gandhi cap and his dhoti were his trade marks. He spoke softly, almost deferentially. Even during the time I met him—not very often though—I never heard him raise his voice. But when he spoke, one instinctively knew that one was in the presence of a man of authority.

When I think of Pundlik Mam I suddenly realise that not in all these years have I heard anyone say one unkind thing about him. His personal life was an open book. He lived for others. He was singularly lacking in ego. He never aspired either for position or power or glory or even—come to think of it—ordinary praise. It would have embarrassed him. He was a giver—not a taker. And he spent an entire life-giving. What he gave was knowledge, education and courage to face life's vicissitudes. It used to be said of Mahatma Gandhi that out of mud he made men. Ask any student of Pundlik Mam. They would undoubtedly say the same thing about him.

I have no idea how he made both ends meet. I had no occasion to visit him at his home. From all accounts he lived a simple life; his wants were few and he surely lived within his means. But there are many stories about how he gave monetary help to those who needed it badly.

CC-O. In Public Domain. Digitized by eGangotri

He did not preach. He practised what the good life should be. The Mahatma once said, when asked for a message, that his life was his message. Pundlik Mam could have said the same thing. His life of dedicated service was his message.

There won't be another like him in these our consumer-oriented times. Pundlik Mam, it is well to remember, lived in another era, an era shaped by men like Swami Vivekananda, Gopalakrishna Gokhale and Rabindranath Tagore. To them Service was their motto. Not amassing a fortune or building a bank balance or having a Mercedez Benz. I have no idea whether Pundlik Mam ever travelled far and wide or kept a diary or did the kind of things we remember our contemporaries for. Sometimes I wish he had at least kept a diary. I suppose it never occurred to him to do so. And to what purpose, he might well have asked himself.

To me he remains the ideal **Karma Yogi** to whom service was God. There never was one like him before and I doubt whether we will ever have one like him in the hereafter. He would have made an ideal member of the Ramakrishna order or of the Serbants of Indian Society. But I think he would have been out of place in both; His was a discipline that was self-imposed. He went out of his way to remould society. Or should it be said that remoulding society by remoulding the young was really his way ?

I have known many men devoted to service, but to me Pundlik Mam stands out like a giant among pigmies. He turned simple living and high thinking into a distinct way of life. In that sense no greater Gandhian ever lived.

His memory will last as long as people remember that Service Above Self is the highest goal in life, which is for ever. ●

Sri Vidyabharathi Book Centre, Sringeri

28-2-1990: ದಿ। ಯು. ಪುಂಡಲೀಕ ಶೆಣೈ ಸಂಸ್ಮರಣ 'ರಂಗಭೂಮಿ'ಯ ವತಿಯಿಂದ ಕಾರ್ಯಕ್ರಮವೂ ಸಿಂಡಿಕೇಟ್‌ಬ್ಯಾಂಕಿನ ಮಾಜಿ ಅಧ್ಯಕ್ಷ ಶ್ರೀ ಅಂಬಲಪಾಡಿ ಕೃಷ್ಣ ರಾವ್‌ರವರ ಅಧ್ಯಕ್ಷತೆಯಲ್ಲಿ ನಡೆಯಿತು. ಚಿತ್ರದಲ್ಲಿ ದಿ। ಶೆಣೈಯವರ ಭಾವಚಿತ್ರಕ್ಕೆ ಉಡುಪಿಯ ಪೂರ್ಣಪ್ರಜ್ಞ ಕಾಲೇಜಿನ ಪ್ರಾಂಶುಪಾಲ ಡಾ। ಪಿ. ನಾರಾಯಣ ರಾವ್ ಹಾರಾರ್ಪಣೆ ಮಾಡುತ್ತಿರುವುದು.

CC-O. In Public Domain. Digitized by eGangotri

CC-O. In Public Domain. Digitized by eGangotri

ಮಹಾ ತಪಸ್ವಿ
ಯು. ಪುಂಡಲೀಕ ಶೆಣೈ

(ಜನನ: 17-4-1896 – ನಿಧನ: 21-12-1976)

– ದಿ। ಡಾ। ಪ. ನಾರಾಯಣ ರಾವ್, ಉಡುಪಿ
ನಿವೃತ್ತ ಪ್ರಾಂಶುಪಾಲ, ಪೂರ್ಣಪ್ರಜ್ಞ ಕಾಲೇಜು, ಉಡುಪಿ

ಉಡುಪಿಯ ಕ್ರಿಶ್ಚಿಯನ್ ಹೈಸ್ಕೂಲಿನಲ್ಲಿ ದೀರ್ಘಕಾಲ ಅಧ್ಯಾಪಕರಾಗಿದ್ದು ಕೊನೆಗೆ ಮಣಿಪಾಲ ಹೈಸ್ಕೂಲಿನ ಮುಖ್ಯಾಧ್ಯಾಪಕರಾಗಿ 'ನಿವೃತ್ತ'ರಾದ ಯು. ಪುಂಡಲೀಕ ಶೆಣೈ – ಇವರ ಪಾಲಿನ ಅಧ್ಯಯನವು ಕೊನೆಗೊಂಡುದು ಇವರು ಬಿ.ಎ. ಮತ್ತು ಎಲ್.ಟಿ. ಪದವಿಗಳನ್ನು ಪಡೆದಾಗಲೂ ಅಲ್ಲ, ಇವರು ಮಣಿಪಾಲ ಹೈಸ್ಕೂಲಿನ ಮುಖ್ಯಾಧ್ಯಾಪಕ ಸ್ಥಾನದಿಂದ 'ನಿವೃತ್ತ'ರಾದಾಗಲೂ ಅಲ್ಲ, ಇವರು 1976ರಲ್ಲಿ ತನ್ನ 80ನೆಯ ವಯಸ್ಸಿನಲ್ಲಿ ಕೊನೆಯುಸಿರೆಳೆದಾಗ ಮಾತ್ರವೇ. ಇವರ ಅಧ್ಯಾಪನವೂ ಇವರ ಅಧ್ಯಯನದಂತೆಯೇ ಅತ್ಯಂತ ಸಮರ್ಥವಾದುದಾಗಿತ್ತು; ಅಷ್ಟೇ ಅಲ್ಲ, ಅತ್ಯಂತ ಅರ್ಪಣಾಭಾವದ್ದು. ನಿರಂತರ ಅಧ್ಯಯನದಿಂದ, ಅರ್ಪಣಾಭಾವದ ಅಧ್ಯಾಪನದಿಂದ, 'ನಿವೃತ್ತಿ'ಯ ಅನಂತರದ ಧರ್ಮಾರ್ಥ ಅಧ್ಯಾಪನದಿಂದ, ತ್ರಿಕರಣಶುದ್ಧಿಯಿಂದ, ಚಾರಿತ್ರ್ಯಶುದ್ಧಿಯಿಂದ ಮತ್ತು ಅಖಂಡ ಬ್ರಹ್ಮಚರ್ಯದಿಂದ ಇವರೊಬ್ಬ ತಪಸ್ವಿಯೇ ಆಗಿದ್ದರು. 'ಜಪತಪ' ಮಾಡದೆಯೂ, ''ಪೂಜೆಗೀಜೆ'' ನಡೆಸದೆಯೂ, 'ದೇವರ ದರ್ಶನ'ಕ್ಕಾಗಿ ದೇವಸ್ಥಾನಗಳಿಗೆ ಮತ್ತು ತೀರ್ಥಕ್ಷೇತ್ರಗಳಿಗೆ ಹೋಗದೆಯೂ, 'ದೇವತಾ ಮನುಷ್ಯ'ನೆಂದೇ ಹತ್ತು ಸಮಸ್ತರಿಂದ ಮನ್ನಣೆ ಪಡೆದವರು ಇವರು.

ಇಂಗ್ಲಿಷಿನ ಮೇಲೆ ಇವರ ಪ್ರಭುತ್ವವು ಸಂಪೂರ್ಣವಾದುದಾಗಿತ್ತು. ಇಂಗ್ಲಿಷ್ ಸಾಹಿತ್ಯದ ಹೆಚ್ಚಿನ ಪರಿಚಯವು (ಅಂದರೆ, ಇಂಗ್ಲಿಷ್ ಸಾಹಿತ್ಯದ ಅಧ್ಯಯನದಿಂದಲೇ ಸ್ನಾತಕೋತ್ತರ ಪದವಿಗಳನ್ನು ಪಡೆದು, ಕಾಲೇಜುಗಳಲ್ಲಿ ''ಇಂಗ್ಲಿಷ್ ಉಪನ್ಯಾಸಕ'' ರಾಗಿರುವ ಮಂದಿಗೆ ಸಾಮಾನ್ಯವಾಗಿ ಇರುವಷ್ಟು ಪರಿಚಯವು) ಇವರಿಗಿತ್ತೆಂದು ಅನ್ನುವಂತಿರಲಿಲ್ಲ, ನಿಜ. ಆದರೆ ಇಂಗ್ಲಿಷನ್ನಂತು ಈ ಮಂದಿಗಿಂತ ಇವರೇ ಹೆಚ್ಚು

CC-O. In Public Domain. Digitized by eGangotri
ತಿಳಿದುಕೊಂಡಿದ್ದರು. ಇಂಗ್ಲಿಷ್ ವ್ಯಾಕರಣವನ್ನು ಮತ್ತು ಇಂಗ್ಲಿಷೇ ತಾಯ್ನುಡಿಯಾಗಿದ್ದವರು ಅದರ ಬಳಕೆಯಲ್ಲಿ ರೂಢಿಸುತ್ತಿದ್ದ ಪ್ರಯೋಗಗಳನ್ನು ಚೆನ್ನಾಗಿ ತಿಳಿದುಕೊಂಡಿದ್ದರು; ಅಲ್ಲ, ತಿಳಿದುಕೊಳ್ಳುತ್ತಲೇ ಇದ್ದರು. ಹತ್ತು ಸಮಸ್ತರಿಗೆ ನೀರಸವೆನ್ನಿಸುವ ಆರ್ಥಕೋಶಗಳ (ಮುಖ್ಯವಾಗಿ Concise Oxford Dictionary ಮತ್ತು Pocket Oxford Dictionary – ಇವುಗಳ) ಆಳವಾದ ಅಧ್ಯಯನವನ್ನು ಇವರು ಅಧ್ಯಾಪನಕ್ಕೆ ತೊಡಗಿದಂದಿನಿಂದ ಮತ್ತೆ ಮತ್ತೆ ಮಾಡುತ್ತಲೇ ಇದ್ದರು. Pocket Oxford Dictionary – ಇದರಿಂದ ಅತಿ ಹೆಚ್ಚು ತಿಳಿವನ್ನು ಪಡೆಯುವುದು ಹೇಗೆ ಎಂಬ ಕುರಿತಾಗಿಯೇ ಕೆಲವು ಉಪನ್ಯಾಸಗಳನ್ನೇ ನೀಡಬಹುದಾಗಿದೆ ಎಂದು ಇವರು ಅನ್ನುತ್ತಿದ್ದರು.

ಇವರ ವಶವಿದ್ದ ಈ ಎರಡು ಆರ್ಥಕೋಶಗಳ ಪುಟಗಳ ಅಂಚುಗಳಲ್ಲಿ ವಿಪುಲವಾಗಿ ಟಿಪ್ಪಣಿಗಳನ್ನು ಬರೆದಿಟ್ಟಿದ್ದರು. ''ಆರ್ಥಕೋಶಗಳ ಪುಟಗಳ ಅಂಚುಗಳಲ್ಲಿಯೂ ಟಿಪ್ಪಣಿಗಳು ಯಾಕಪ್ಪ !'' ಎಂದು ಬಹುಮಂದಿ ಆಚ್ಚರಿಪಟ್ಟುದುಂಟು. ''ಜೀವಂತವಾಗಿರುವ ಭಾಷೆಯೆಂದರೆ ನಿಂತ ನೀರಂತಲ್ಲ. ಅದು ಬೆಳೆಯುತ್ತಲೇ ಇರುತ್ತದೆ; ಬದಲಾಗುತ್ತಲೂ ಇರುತ್ತದೆ. ಅದರ ಪದಸಂಪತ್ತು ಹೆಚ್ಚುತ್ತಿರುವುದಷ್ಟೇ ಅಲ್ಲ; ಇಂಗ್ಲಿಷೇ ತಾಯ್ನುಡಿಯಾಗಿದ್ದ ಮಂದಿಯಲ್ಲಿಯೂ ಹೆಚ್ಚು ಹೆಚ್ಚು ಮಂದಿ ಅರಿವಿದ್ದೋ ಅರಿವಿರದೆಯೋ ಕೆಲವು ಅಪಪ್ರಯೋಗಗಳನ್ನೇ ಬಳಸುತ್ತಿರುವುದು ರೂಢಿಯಾಯಿತೆಂದರೆ ಆ ಅಪಪ್ರಯೋಗಗಳೇ ಸರಿಯಾದವು ಎಂದನ್ನಿಸುವ ಕಾಲವೂ ಬರುವುದಿದೆ. ವ್ಯಾಕರಣವೆಂದರೆ, ಆರ್ಥಕೋಶವೆಂದರೆ ಭಾಷೆಯ ಬಳಕೆಯಲ್ಲಿಯ ರೂಢಿಗಳ ಕ್ರೋಢೀಕರಣ, ಅಷ್ಟೆ. ರೂಢಿಯು (''ಯೂಸೆಜ್'') ಮುಂದೆ ಹೋಗುತ್ತಿರುತ್ತದೆ; ವ್ಯಾಕರಣಗಳ, ಆರ್ಥಕೋಶಗಳ ಕರ್ತಾರರುಗಳು ಹಿಂಬಾಲಿಸುತ್ತಿರುವವರು, ದಾಖಲಿಸಿಕೊಳ್ಳುತ್ತಿರುವವರು, ಅಷ್ಟೆ. ಇಂಗ್ಲಿಷೇ ತಾಯ್ನುಡಿಯಾಗಿದ್ದ ಮಂದಿ ದೀರ್ಘಾವಧಿಯಲ್ಲಿ ಅರಿವಿದ್ದೋ ಅರಿವಿರದೆಯೋ ಅದರ ಬಳಕೆಯಲ್ಲಿ ಹೊಸ ರೂಢಿಗಳಿಗೆ ಕಾರಣರಾದರೆಂದರೆ, ವ್ಯಾಕರಣಗಳ ಮತ್ತು ಆರ್ಥಕೋಶಗಳ ಪರಿಷ್ಕೃತ ಆವೃತ್ತಿಗಳನ್ನು ಹೊರತರುವ ಪ್ರಮೇಯವು ಬರುವುದು''. ಇದು ಈಗಿನ ಭಾಷಾಶಾಸ್ತ್ರದ ತಜ್ಞರ ಅಂಬೋಣ. ಪುಂಡಲೀಕ ಶೆಣೈ – ಇವರು ಇದನ್ನು ಆಗಲೇ ಕಂಡುಕೊಂಡಿದ್ದರು. ಇಂಗ್ಲಿಷಿನ ಬಳಕೆಯಲ್ಲಿಯ ಹೊಸ ಹೊಸ ರೂಢಿಗಳ ಕುರಿತು ಹೊಸ ಹೊಸ ಗ್ರಂಥಗಳು ಪ್ರಕಟವಾದಂತೆ ಅವುಗಳ ಅಧ್ಯಯನವನ್ನು ತಪ್ಪದೆ ಮಾಡುತ್ತಿದ್ದರು. ಆರ್ಥಕೋಶಗಳ ಪುಟಗಳ ಅಂಚುಗಳಲ್ಲಿಯೂ ಟಿಪ್ಪಣಿಗಳನ್ನು ಬರೆದಿಡುವ ಪ್ರಮೇಯವು ಇವರಿಗೆ ಬರುತ್ತಿದುದು ಹೀಗೆ!

Sri Vidyabharathi Book Centre, Sringeri

CC-O. In Public Domain. Digitized by eGangotri

ಇಂಗ್ಲಿಷಿನ ಬಳಕೆಯಲ್ಲಿಯ ರೂಢಿಗಳ ಕುರಿತು ನಮ್ಮಲ್ಲಿ ಬಹುತೇಕ ಸ್ನಾತಕೋತ್ತರ ಪದವೀಧರರಿಗೂ ತಿಳಿದಿರದ ಅನೇಕ (ಹೌದು, ನಿಜಕ್ಕೂ ಅನೇಕ) ಸೂಕ್ಷ್ಮ ವಿಚಾರಗಳನ್ನು ಇಂಗ್ಲೆಂಡಿಗೆ ಹೋಗಿರದ ಪುಂಡಲೀಕ ಶೆಣೈ – ಇವರು ತಿಳಿದುಕೊಂಡಿದ್ದರು. (ಉದಾಹರಣೆ: ಗರ್ಭಕ್ಕೆ ಸಂಬಂಧಿಸಿದಂತೆ deliver ಎಂಬ ಇಂಗ್ಲಿಷ್ ಕ್ರಿಯಾಪದಕ್ಕೆ ''ಗರ್ಭ (ಭಾರ) ಇಳಿಸು'' ಎಂಬ ಅರ್ಥವಿದೆ. ಅಂದ ಮಾತ್ರಕ್ಕೆ 'ಹೆತ್ತವಳು ಗರ್ಭ (ಭಾರ) ಇಳಿಸಿದಳು' ಎಂದನ್ನುವುದು ಸರಿಯಲ್ಲ; ''ಸೂಲಗಿತ್ತಿಯು ಗರ್ಭ (ಭಾರ) ಇಳಿಸಿದಳೆ''ಂದನ್ನುವುದು ಸರಿ; ಅಂದರೆ, deliver ಎಂಬುದರ ಅರ್ಥ 'ಹೆರಿಸು' ಹೊರತು, 'ಹೆರು' ಅಲ್ಲ. ಹಾಗಾಗಿ Queen Elizabeth delivered a baby ಎಂಬ ವರದಿಯು ನಮ್ಮಲ್ಲಿಯ ಪತ್ರಿಕೆಯೊಂದರಲ್ಲಿ ಕಾಣಿಸಿದಾಗ, ನಮ್ಮಲ್ಲಿ ಪುಂಡಲೀಕ ಶೆಣೈ – ಅವರಂತೆ ಆ ವರದಿಗೆ ಪ್ರತಿಕ್ರಿಯಿಸಿದ್ದವರು ಬೇರೆ ಯಾರೂ ಇರಲಿಲ್ಲ. ''ಅಯ್ಯೋ! ರಾಣಿಯೇ ಸೂಲಗಿತ್ತಿಯಾಗಿದ್ದ ಸನ್ನಿವೇಶಕ್ಕೆ ಒಪ್ಪುವ ಮಾತಿದು! ರಾಣಿಯೇ ಹೆರಿಸಿದ್ದ ಸನ್ನಿವೇಶಕ್ಕೆ ಹೊರತು, ರಾಣಿಯೇ ಹೆತ್ತ ಸನ್ನಿವೇಶಕ್ಕೆ ಒಪ್ಪುವ ಮಾತು ಇದಲ್ಲ; delivered ಎಂದನ್ನುವ ಬದಲಿಗೆ was delivered of ಎಂದನ್ನಬೇಕಾಗಿತ್ತು'' – ಇದು ಪುಂಡಲೀಕ ಶೆಣೈ ಅವರ ಪ್ರತಿಕ್ರಿಯೆಯಾಗಿತ್ತು. ಆದರೆ ಇಂದಿಗೂ ಎಲ್ಲ ಇಂಗ್ಲಿಷ್ - ಕನ್ನಡ ನಿಘಂಟುಗಳ ಪ್ರಕಾರ, deliver ಎಂದರೆ 'ಹೆರು' ! ಇಂಗ್ಲಿಷಿನ ತಪ್ಪು ಬಳಕೆಯು ಎಲ್ಲಿ ಎದುರಾದರೂ ಅಲ್ಲಿಯೇ ತಪ್ಪನ್ನು ತೋರಿಸಿಕೊಡುತ್ತಿದ್ದವರು ಪುಂಡಲೀಕ ಶೆಣೈ – ಹೋಟೇಲಿನಲ್ಲಿ 'ಸಪ್ಲಾಯ್' ಮಾಡುವ ಮಾಣಿಯು ಒಂದೇ ಒಂದು 'ಬನ್' (bun) ಇರುವ ತಟ್ಟೆಯನ್ನು ಅವರ ಮುಂದೆ ತಂದಿರಿಸಿ, ''ಇಗೊಳ್ಳಿ, ಒಂದು ಬನ್ಸ್'' ಎಂದರೆ, ಇವರು ''ಒಂದಕ್ಕಿಂತ ಹೆಚ್ಚಿದ್ದರೆ ಮಾತ್ರ 'ಬನ್ಸ್' ಎನ್ನಬೇಕಪ್ಪಾ'' ಎನ್ನುತ್ತಿದ್ದರು.

ನಾನು ಪೂರ್ಣಪ್ರಜ್ಞ ಕಾಲೇಜಿನಲ್ಲಿ ಪ್ರಾಂಶುಪಾಲನಾಗಿದ್ದಾಗ ಇವರೊಮ್ಮೆ ನನ್ನೊಡನೆ ಮಾತಾಡಲು ಕಾಲೇಜಿಗೆ ಬಂದಿದ್ದರು. ನನ್ನ ಕೊಠಡಿಯ ಬಾಗಿಲ ಹೊರಗೆ ನಿಂತಿದ್ದ ಎಟೆಂಡರ್ ಇವರನ್ನು ತಡೆದು ''ಒಳಗೆ ಲೇಡೀಸ್ ಇದ್ದಾರೆ'' ಎಂಬ ಸಮಜಾಯಿಸಿ ನೀಡಿದನಂತೆ. ನನ್ನೊಡನೆ ಮಾತಾಡಿಕೊಂಡಿದ್ದ ಅಧ್ಯಾಪಿಕೆಯೊಬ್ಬರು ನನ್ನ ಕೊಠಡಿಯಿಂದ ಹೊರಗೆ ಹೋದ ಮೇಲೆಯೂ ಪುಂಡಲೀಕ ಶೆಣೈ ಬಾಗಿಲ ಹೊರಗೆಯೇ ನಿಂತಿದ್ದರಂತೆ. ''ನೀವಿನ್ನು ಒಳಗೆ ಹೋಗಬಹುದಲ್ಲ?'' ಎಂದ್ದನಂತೆ ಎಟೆಂಡರ್. ''ಪ್ರಾಂಶುಪಾಲರ ಕೊಠಡಿಯಿಂದ ಒಬ್ಬರು ಮಾತ್ರ ಬಂದುದಾಗಿದೆ. ನೀವು ಒಳಗೆ ಲೇಡೀಸ್ ಇದ್ದಾರೆಂದು ಹೇಳಿದ್ದಿರಿ. ಒಬ್ಬರಾದರೂ ಒಳಗಿರ

Sri Vidyabharathi Book Centre, Sringeri

CC-O. In Public Domain. Digitized by eGangotri
ಬೇಕಲ್ಲ ?'' ಎಂದು ಮಾರ್ನುಡಿದರಂತೆ ಪುಂಡಲೀಕ ಶೆಣೈ ಮತ್ತು ಏಕವಚನ ಬಹುವಚನ ರೂಪಗಳ ಕುರಿತು ಆ ಎಟಿಂಡರನಿಗೆ ತಿಳಿಸಿದ ಮೇಲೆಯೇ ಅವರು ನನ್ನ ಕೊಠಡಿಯೊಳಗೆ ಬಂದುದಂತೆ. ಇದನ್ನು ಮತ್ತೆ ಆ ಎಟಿಂಡರನೇ ನನಗೆ ತಿಳಿಸಿದ್ದ ! ತನ್ನ ಸೈಕಲಿನ ಒಂದು ಟಯರಿನಲ್ಲಿ ಹಠಾತ್ತಾಗಿ ಗಾಳಿಯೇ ಇಲ್ಲವೆಂದಾದಾಗ, ಸೈಕಲನ್ನು ತಳ್ಳಿಕೊಂಡು ''ಸೈಕಲ್ ಅಂಗಡಿ''ಯೊಂದಕ್ಕೆ ಹೋಗಿ, ''ಈ ಟಯರಿಗೆ ಏನಾಗಿದೆ, ನೋಡಿ'' ಎಂದಾಗ ಅವನು ''ಪ್ಯಾಚ್ ಆಗಿದೆ'' ಎಂದುಕೊಂಡು ಟಯರನ್ನು ಸರಿಪಡಿಸಿಕೊಟ್ಟನಂತೆ. ''ಟಯರಿಗೆ ನೀವು ಈಗ ಮಾಡಿದ್ದೇನು ?'' ಎಂದು ಇವರು ಕೇಳಿದರಂತೆ. ''ಪ್ಯಾಚ್ ಮಾಡಿದ್ದೇನೆ'' ಎಂದು ಅವನು ಉತ್ತರಿಸಿದನಂತೆ. ''ಟಯರಿಗೆ ಆದುದೇನೆಂದು ಕೇಳಿದಾಗ 'ಪ್ಯಾಚ್' ಎಂದಿರಿ. ಅದಕ್ಕಾಗಿ ಮಾಡಿದ್ದೇನೆಂದು ಕೇಳಿದಾಗಲೂ 'ಪ್ಯಾಚ್' ಎಂದಿರಿ. ಟಯರಿಗೆ ಆದುದೇನೆಂದು ಕೇಳಿದಾಗ 'ಪಂಕ್ಚರ್' ಎಂದು ಉತ್ತರಿಸಬೇಕಾಗಿತ್ತು'' ಎಂದು ಸೈಕಲ್ ಅಂಗಡಿಯವನಿಗೆ ತಿಳಿಸದೆ ಅಲ್ಲಿಂದ ಅವರ ನಿರ್ಗಮನವಾಗಿದ್ದರೆ ಅವರು ಪುಂಡಲೀಕ ಶೆಣೈಯವರೇ ಅಲ್ಲ ಎಂಬಂತಾಗುತ್ತಿತ್ತು !

ಅವರು ನಿಧನರಾದಾಗ ಉಡುಪಿಯಲ್ಲಿ ಏರ್ಪಡಿಸಲ್ಪಟ್ಟಿದ್ದ ಸಾರ್ವಜನಿಕ ಸಭೆಯೊಂದರಲ್ಲಿ ಶ್ರೀ ಕು. ಶಿ. ಹರಿದಾಸ ಭಟ್ಟರು ಹೀಗಂದಿದ್ದರು:- ''ಪುಂಡಲೀಕ ಶೆಣೈಯವರು ಇಂಗ್ಲಿಷಿನ ಅಧ್ಯಯನವನ್ನು ಮಾಡಿ ಮುಗಿದುದೇ ಇಲ್ಲ. ಡಾ। ನಾರಾಯಣ ರಾಯರು ಉಡುಪಿಗೆ ಬಂದ ಮೇಲೆ ಅವರ ಶಿಷ್ಯರ ಸಂಖ್ಯೆಯು ಪುಂಡಲೀಕ ಶೆಣೈಯವರಿಂದಾಗಿ ಒಂದರಷ್ಟು ಹೆಚ್ಚಿರಬೇಕು''. ಆದರೆ ಮತ್ತೆ ನನ್ನ ಭಾಷಣದಲ್ಲಿ ನಾನು ಹೀಗಂದೆ: – ''ನಾನು ಉಡುಪಿಗೆ ಬಂದಾಗ ಪುಂಡಲೀಕ ಶೆಣೈಯವರು ನನ್ನ ಹೊಸ ಶಿಷ್ಯರಾದದ್ದಲ್ಲ. ಅದಕ್ಕಿಂತ ಇಪ್ಪತ್ತೆರಡು ವರ್ಷಗಳಷ್ಟು ಹಿಂದೆಯೇ ಮಂಗಳೂರಿನಲ್ಲಿದ್ದುಕೊಂಡೂ ಅವರ ಶಿಷ್ಯನಾಗಿದ್ದ ನಾನು ಉಡುಪಿಗೆ ಬಂದು ಉಡುಪಿಯಲ್ಲಿಯ ಅವರ ಶಿಷ್ಯಂದಿರ ಸಂಖ್ಯೆಯನ್ನು ಹೆಚ್ಚಿಸಿದ್ದಾಗಿತ್ತು''.

ವೇತನ ಪಡೆದು ಮಾಡಿದ ಅಧ್ಯಾಪನದಿಂದ ನಿವೃತ್ತರಾದ ಮೇಲೆಯೂ ಇವರು ನಿಜ ನಿವೃತ್ತಿಯನ್ನು ಹೊಂದಿದ್ದಿಲ್ಲ, ಬಯಸಿದ್ದೂ ಇಲ್ಲ. ವೇತನ ಪಡೆಯದೆ ದಿನವೆಲ್ಲಾ ಮನೆಯಲ್ಲಿಯೇ ಇಂಗ್ಲಿಷ್ ಮತ್ತು ಗಣಿತ – ಇವುಗಳನ್ನು ಯಾರು ಬಂದರೂ ಅವರಿಗೆ ಧರ್ಮಾರ್ಥವಾಗಿ ಕಲಿಸುತ್ತಿದ್ದರು. ದಿನವೆಲ್ಲಾ ಮನೆಯಲ್ಲಿ ಕಲಿಸಿದ್ದು ಸಾಲದ್ದಕ್ಕೋ ಎಂಬಂತೆ ಕೆಲವು ವರ್ಷಗಳ ಪರ್ಯಂತ 'ರಾತ್ರಿ ಶಾಲೆ'ಯೊಂದರ ವೇತನರಹಿತ ಮುಖ್ಯಾಧ್ಯಾಪಕರಾಗಿದ್ದುಕೊಂಡು ಅಲ್ಲಿಯೂ ಇಂಗ್ಲಿಷ್ ಮತ್ತು ಗಣಿತ – ಇವುಗಳನ್ನು ಕಲಿಸುತ್ತಿದ್ದರು. ತಾನು ತನ್ನ ಮನೆ

Sri Vidyabharathi Book Centre, Sringeri

CC-O. In Public Domain. Digitized by eGangotri

ಯಲ್ಲಿಯೇ ಕಲಿಸಿದ ಮಕ್ಕಳ ಹೆತ್ತವರು ಸಿರಿವಂತರಾಗಿದ್ದು, ಅವರೆಷ್ಟು ಒತ್ತಾಯಿಸಿದರೂ ಪುಂಡಲೀಕ ಶೆಣೈಯವರು ಸಂಭಾವನೆಯನ್ನು ಸ್ವೀಕರಿಸುತ್ತಿರಲಿಲ್ಲ. ''ನಿಮ್ಮಿಂದಾಗಿ ನಮ್ಮ ಹುಡುಗ ಪಾಸಾಗಿದ್ದಾನೆ'' ಎಂದುಕೊಂಡು ಬೆಳ್ಳಿಯ ತಟ್ಟೆಗಳಲ್ಲಿ ಹಣ್ಣುಹಂಪಲನ್ನು ತರುವವರು ಇರುತ್ತಿದ್ದರು. ಬೆಳ್ಳಿಯ ತಟ್ಟೆಯನ್ನು ಪರಿಗ್ರಹಿಸುವುದು ಅದಂತಿರಲಿ, ಹಣ್ಣುಹಂಪಲನ್ನೂ ಪರಿಗ್ರಹಿಸದೆ, ತಾನು ಕಣ್ಣೀರಿಳಿಸಿ, ತಂದವರೂ ಕಣ್ಣೀರಿಳಿಸುವಂತೆ ಮಾಡುತ್ತಿದ್ದರು. ''ಪಾಠ ಹೇಳಿ'' ಎಂದುಕೊಂಡು ಬಂದ ಮಕ್ಕಳ ಕುಲಗೋತ್ರಗಳನ್ನು ವಿಚಾರಿಸುವ ಗೊಡವೆಗೆ ಇವರು ಹೋಗುತ್ತಿರಲಿಲ್ಲ. ಒಮ್ಮೆ ಯಾರದ್ದೋ ನಾಯಿಯೊಂದು ಇವರ ಅಂಗಳದಲ್ಲಿ ಸತ್ತು ಬಿದ್ದಿತ್ತು. ಮನೆಯ ಎದುರಿನ ರಸ್ತೆಯನ್ನು ಗುಡಿಸುತ್ತಿದ್ದ ಮುನ್ಸಿಪಲ್ ಕೆಲಸಗಾರನನ್ನು ಕರೆದು ಸತ್ತ ನಾಯಿಯನ್ನು ಅಂಗಳದಿಂದ ಒಯ್ಯುವಂತೆ ವಿನಂತಿಸಿಕೊಂಡರು. ಅವನು ಸಂತೋಷದಿಂದಲೇ ಆ ಕೆಲಸವನ್ನು ಮಾಡಿದನೆಂದು ಅವನಿಗೆ ಇವರು ಸಂಭಾವನೆಯನ್ನು ನೀಡಲು ಕೈಯೊಡ್ಡಿದಾಗ ಅವನು, ''ಛೆ! ನೀವು ಪುಕ್ಕಟೆಯಾಗಿ ನನ್ನ ಮಗನಿಗೆ ವರ್ಷಗಟ್ಟಲೆ ನಿಮ್ಮ ಮನೆಯಲ್ಲೇ ಕಲಿಸಿದ್ದವರು; ನಿಮ್ಮಿಂದ ನಾನು ಹಣ ಪಡೆದರೆ ದೇವರು ಮೆಚ್ಚಲಿಕ್ಕಿಲ್ಲ'' ಎಂದನ್ನದಿರಲಿಲ್ಲ. ಪುಂಡಲೀಕ ಶೆಣೈಯವರಿಗೆ ಧನುರ್ವಿದ್ಯೆ ಗೊತ್ತಿದ್ದಿದ್ದರೆ ಏಕಲವ್ಯನಂಥವನನ್ನು ಶಿಷ್ಯನಾಗಿ ಅಂಗೀಕರಿಸಲು ಸಂಕೋಚಪಡುತ್ತಿರಲಿಲ್ಲ.

ಇವರ ಪೀಳಿಗೆಯ ನಿವೃತ್ತ ಖಾಸಗಿ ಶಾಲಾ ಶಿಕ್ಷಕರಿಗೆ ಕೆಲವು ಕಾಲ ಪಿಂಚಣಿಯಿರಲಿಲ್ಲ. ಇವರೇ ಸರಕಾರದೊಂದಿಗೆ ಬಹಳಷ್ಟು ಪತ್ರವ್ಯವಹಾರ ಮಾಡಿದ ಮೇಲೆ ಸೇವಾ ಅವಧಿಯ ಉದ್ದವನ್ನಾಗಲಿ ಕೊನೆಯ ವೇತನವನ್ನಾಗಲಿ ಲೆಕ್ಕಿಸದೆ, ಯಾವುದೋ ಸ್ವಚ್ಛಂದ ನೆಲೆಯಲ್ಲಿ ಸರಕಾರವು ಕೊನೆಗೂ ಬರೇ ರೂ. 40-00ರ ಮಾಸಿಕ ಪಿಂಚಣಿಯನ್ನು ಮಂಜೂರು ಮಾಡಿತ್ತು. ಆದರೆ ಇವರು ಬಹಳಷ್ಟು ಸಂಕಷ್ಟದಲ್ಲಿದ್ದ ಇನ್ನೊಬ್ಬ ನಿವೃತ್ತ ಶಿಕ್ಷಕರಿಗೆ ತನ್ನ ಪಿಂಚಣಿಯನ್ನು ಪ್ರತಿ ತಿಂಗಳೂ ದಾನವಾಗಿ ಕೊಡುತ್ತಿದ್ದರು. ಕೊಟ್ಟ ಸಾಲವು ಹಿಂದೆ ಬಾರದಿದ್ದ ಅನುಭವವು ಸಾಕಷ್ಟು ಆಗಿದ್ದರೂ, ಕಷ್ಟದಲ್ಲಿದ್ದೇವೆಂದುಕೊಂಡು ಸಾಲ ಕೇಳಿದವರಿಗೆ ಸಾಲ ಕೊಡುತ್ತಿದ್ದರು. ಸಾಲವೆಂಬ ನೆಲೆಯಲ್ಲಿ ಅಲ್ಲದೆಯೂ ಅನೇಕ ಮಂದಿಗೆ ಧನಸಹಾಯ ಮಾಡಿದ್ದರು. ಮಿತ ವ್ಯಯವನ್ನು ರೂಢಿಸಿಕೊಂಡಿದ್ದ ಈ ಸನ್ಯಾಸಿಯ ಉಳಿತಾಯವು ಗಣನೀಯ ಪ್ರಮಾಣದ್ದಾಗಿತ್ತು. ಅದನ್ನೆಲ್ಲ ಬ್ಯಾಂಕುಗಳ ಷೇರುಗಳಲ್ಲಿ ಹಾಕಿದ್ದರು. ಹಾಗಾಗಿ ಹೆರವರಿಗೆ ಸಹಾಯ ಮಾಡುವುದು ಸಾಧ್ಯವಾಗುತ್ತಿತ್ತು.

CC-O. In Public Domain. Digitized by eGangotri

ಆದರೆ ಸನ್ಯಾಸಿಯೆಂದು, ಬ್ರಹ್ಮಚಾರಿಯೆಂದು ಯಾರಾದರೂ ಇವರನ್ನು ಹೊಗಳಿದಾಗ, ''ಛೆ ! ಹಾಗನ್ನಬೇಕಾಗಿಲ್ಲ. ನನಗೆ ಸಿನೆಮಾದಲ್ಲಿ ಆಸಕ್ತಿಯಿದೆ, ನಾಟಕದಲ್ಲಿ ಆಸಕ್ತಿಯಿದೆ – ಎಂದನ್ನುತ್ತಿದ್ದರು. ನಾಟಕ ಕಂಪೆನಿಗಳವರು ಮಂಗಳೂರಿನಲ್ಲಿ ಡೇರೆ ಹಾಕಿದಾಗಲೆಲ್ಲ ನಾಟಕಗಳನ್ನು ನೋಡಲು ಮಂಗಳೂರಿಗೂ ಪಯಣಿಸುತ್ತಿದ್ದರು. ಉಡುಪಿಯ 'ರಂಗಭೂಮಿ' ಸಂಸ್ಥೆಯ ಚಟುವಟಿಕೆಗಳಲ್ಲಿ ಬಹಳ ಆಸಕ್ತರಾಗಿದ್ದರು. ಪ್ರತಿ ನಾಟಕದ ಪ್ರತಿ ಪೂರ್ವಪ್ರಯೋಗದ ಸಂದರ್ಭದಲ್ಲಿಯೂ ಉಪಸ್ಥಿತರಿದ್ದು ವಿಮರ್ಶೆಗೆಯ್ಯುತ್ತಿದ್ದರು. ಇಂಥ ಅನೇಕ ಸಂದರ್ಭಗಳಲ್ಲಿ ತನ್ನ ವೆಚ್ಚದಲ್ಲಿಯೇ ಉಪಾಹಾರಗಳ ಪೂರೈಕೆಯಾಗುವಂತೆ ನೋಡಿಕೊಳ್ಳುತ್ತಿದ್ದರು. 'ರಂಗಭೂಮಿ' ಸಂಸ್ಥೆಯ ಕಲಾವಿದರಲ್ಲಿ ಯಾರಾದರೂ ಬ್ಯಾಂಕ್ ನೌಕರರಿದ್ದರೆ, ಅಂಥವರ ವರ್ಗಾವಣೆಯಾಗುವ ಸಾಧ್ಯತೆಯ ಸುಳಿವು ಸಿಕ್ಕಿದರೆ, ಸಾಮಾನ್ಯವಾಗಿ 'ಪ್ರಭಾವ ಬೀರುವುದು' ಎನ್ನುವುದನ್ನು ಮೆಚ್ಚದಿರುತ್ತಿದ್ದ ಪುಂಡಲೀಕ ಶೆಣೈಯವರೇ 'ರಂಗಭೂಮಿ'ಯ ಕಲಾವಿದರ ವರ್ಗಾವಣೆಯನ್ನು ತಪ್ಪಿಸಲು ''ಪ್ರಭಾವ ಬೀರಲಿ''ಕ್ಕೂ ಮುಂದಾಗುತ್ತಿದ್ದರು. 'ರಂಗಭೂಮಿ'ಯ ಕಲಾವಿದರ ಬಗ್ಗೆ ಇವರ ಆತ್ಮೀಯತೆಯು ಅಂತಹುದಾಗಿತ್ತು.

ಸಾಮಾನ್ಯವಾಗಿ ಮಕ್ಕಳಲ್ಲಿ ಮಾತ್ರ ಕಂಡುಬರುವಂಥ ನಿಸ್ಪೃಹತೆಯು ಕೊನೆಯವರೆಗೂ ಪುಂಡಲೀಕ ಶೆಣೈಯರ ವೈಶಿಷ್ಟ್ಯವಾಗಿತ್ತು. ಹ್ಯಾನ್ಸ್ ಕ್ರಿಶ್ಚಿಯನ್ ಆ್ಯಂಡರ್ಸನ್ ಅವರ 'ಸಮ್ರಾಟನ ಉಡುಪು' ಎಂಬ ಕಥೆಯಲ್ಲಿ ಸಮ್ರಾಟನು ಬತ್ತಲೆಯಾಗಿದ್ದುದನ್ನು ಹೇಳಲು ಎಲ್ಲರೂ ಸಂಕೋಚಪಟ್ಟಿದ್ದ ಸನ್ನಿವೇಶದಲ್ಲಿ ''ಅಯ್ಯಯ್ಯೋ ! ಸಮ್ರಾಟರು ಬತ್ತಲೆಯಾಗಿದ್ದಾರಲ್ಲ ?'' ಎಂದು ಉದ್ಗರಿಸಿದ ಮಗುವಿನಂತಿದ್ದವರು ಪುಂಡಲೀಕ ಶೆಣೈಯವರು. ಗಾಂಧಿಯ, ನೆಹರುವಿನ ಮತ್ತು ಕಾಂಗ್ರೆಸಿನ ಕಟ್ಟಾ ಅಭಿಮಾನಿಗಳ ನಿಕಟವರ್ತಿಯಾಗಿದ್ದು, ವರ್ಷಗಟ್ಟಲೆ 'ನಾನು ಕಾಂಗ್ರೆಸಿಗ' ಎಂದು ಅಭಿಮಾನದಿಂದ ಹೇಳಿಕೊಂಡಿದ್ದ ಪುಂಡಲೀಕ ಶೆಣೈಯವರು ನೆಹರು ಜೀವಂತವಾಗಿದ್ದಾಗಲೇ ಒಮ್ಮೆ, ''ಇಂದಿರಾ ಗಾಂಧಿಯು ಫಿರೋಜ್ ಗಾಂಧಿಯೊಂದಿಗೆ ಇರದೆ ತಂದೆಯೊಂದಿಗೆ ಇರುವುದೇಕೆ ?'' ಎಂದು ಕೇಳಿ, ತನ್ನ ಬಳಗದವರನ್ನೆಲ್ಲ ತಬ್ಬಿಬ್ಬಾಗಿಸಿದ್ದರು. ಇಂದಿರಾ ಗಾಂಧಿಯು ಘೋಷಿಸಿದ್ದ 'ತುರ್ತು ಪರಿಸ್ಥಿತಿ'ಯ ಅವಧಿಯಲ್ಲಿ ಉಡುಪಿಯ ಹಲವರು ಸೆರೆಮನೆಗೆ ಒಯ್ಯಲ್ಪಟ್ಟಾಗ ಇವರು ತಕ್ಕಂತೆ ಸ್ಪಂದಿಸಿದ್ದರು; ಅದುವರೆಗೆ ಕಟ್ಟಾ ಕಾಂಗ್ರೆಸಿಗನೆಂದು ತನ್ನನ್ನು ಕರೆದುಕೊಂಡಿದ್ದ ಇವರು ಕಾಂಗ್ರೆಸಿನ ಟೀಕಾಕಾರರಾದರು. 'ತುರ್ತು ಪರಿಸ್ಥಿತಿ'ಗೆ ಕೊನೆಯಿಲ್ಲವೆಂಬಂತೆ ಅನ್ನಿಸಿದಾಗ, ಅಲ್ಲಲ್ಲಿ ವಿಧ್ವಂಸಕ ಕೃತ್ಯಗಳಾಗಬಾರದೇಕೆ ಎಂದು

CC-O. In Public Domain. Digitized by eGangotri

ಇವರು ಖಾಸಗಿ ಸಂಭಾಷಣೆಯಲ್ಲಿ ಕೇಳಿದ್ದರು. ''ಇನ್ನು ಕೆಲವು ಕಾಲ ಹೋದರೆ, ವಿಧ್ವಂಸಕರು ಬೇಕಾಗಿದ್ದಾರೆಂದನ್ನುವ ಜಾಹೀರಾತಿಗೂ ನೀವು ಓಗೊಡಲಿಕ್ಕಿದ್ದೀರಿ'' ಎಂದು ನಾನು ಇವರನ್ನು ಗೇಲಿಮಾಡಿದ್ದಿದೆ. ಆದರೆ 'ತುರ್ತು ಪರಿಸ್ಥಿತಿ'ಯು ಮುಗಿಯುವ ಮುನ್ನವೇ ಇವರ ಆಯುಷ್ಯವು ಮುಗಿಯಿತು.

ಬಲವಾದ ಕೆಲವು ಪೂರ್ವಾಗ್ರಹಗಳಿದ್ದವರು ಅವರು. ಕ್ರಿಕೆಟ್ ಆಟವನ್ನು ಅವರು ಸಹಿಸುತ್ತಿರಲಿಲ್ಲ, ನವ್ಯ ಕಲೆಯನ್ನು ಮೆಚ್ಚುತ್ತಿರಲಿಲ್ಲ. ಯಕ್ಷಗಾನಕ್ಕೆ ಅವರ ಆಕ್ಷೇಪವು ವಿಚಿತ್ರವಾದುದು:– ''ಛೆ! ದೇವರುಗಳು ಬಂದು ನಮ್ಮ ಎದುರಿಗೆ ಕುಣಿಯುವು ದೆಂದರೇನು ?''

ಅಧ್ಯಯನ ಅಧ್ಯಾಪನಗಳಲ್ಲಿ ಅವರಿಗೆ ಆಸಕ್ತಿಯೆಷ್ಟಿತ್ತೋ ಅಷ್ಟೇ ಅನಾಸಕ್ತಿಯು ಅವರಿಗೆ ಇತರ ಕೆಲವು ವಿಷಯಗಳಲ್ಲಿತ್ತು. ಅವರ ಗಂಡು ಬಿಡಾರದಲ್ಲಿ ಕಸಗುಡಿಸುವ ಕ್ರಮವಿರಲಿಲ್ಲ. ಮನೆಯೊಳಗೆ ವಸ್ತುಗಳು ಚೆಲ್ಲಾಪಿಲ್ಲಿಯಾಗಿ ಇರುತ್ತಿದ್ದುವು. ತನ್ನ ಒಟ್ಟು ಸೊತ್ತು ಎಷ್ಟಿತ್ತೆನ್ನುವುದರ ಪರಿವೆಯೇ ಇರದೆ ಅವರು ಬರೆದಿದ್ದ ಇಷ್ಟಪತ್ರದಲ್ಲಿ ಕೇವಲ ಅಂದಾಜಿಯಿಂದ ಒಂದಿಷ್ಟು ಹಣವನ್ನು ನಮೂದಿಸಿ, ಅಷ್ಟನ್ನು ಯಾವ ಬಂಧುಗಳಿಗೆ ಮತ್ತು ಯಾವ ಸಂಸ್ಥೆಗಳಿಗೆ ಯಾವ ಅನುಪಾತದಲ್ಲಿ ಹಂಚತಕ್ಕದೆಂದು ಹೇಳಿ, ಮತ್ತೆ ಈ ಮಾತನ್ನೂ ಸೇರಿಸಿದ್ದರು: ''ನನ್ನ ಸೊತ್ತು ಇಷ್ಟಕ್ಕಿಂತ ಹೆಚ್ಚಾಗಿದ್ದರೆ ಅಥವಾ ಕಮ್ಮಿಯಾಗಿದ್ದರೆ, ಎಷ್ಟಿದೆಯೋ ಅಷ್ಟನ್ನು ನಾನು ಸೂಚಿಸಿರುವ ಅನುಪಾತದಲ್ಲಿಯೇ ಹಂಚತಕ್ಕದ್ದು''. ಹಣವನ್ನು ಮುಖ್ಯವೆಂದು ಬಗೆದವರೇ ಅಲ್ಲ ಅವರು ! ವಸ್ತುತಃ ಅವರ ಉಳಿತಾಯವು ಅವರು ಎಣಿಸಿದ್ದುದಕ್ಕಿಂತ ಬಹಳಷ್ಟು ಹೆಚ್ಚಾಗಿತ್ತು. ಅವರ ಕೊನೆಯ ವರ್ಷದಲ್ಲಿ ಒಬ್ಬಿಬ್ಬರು ಆತ್ಮೀಯರೊಡನೆ ಮನಬಿಚ್ಚಿ ಮಾತಾಡಿ ಹೀಗೆ ಕಳವಳಪಟ್ಟಿದ್ದರು: ''ನಾನು ಜಪತಪ ಮಾಡಿದವನಲ್ಲ, ಪೂಜೆಗೀಜೆ ನಡೆಸಿದವನಲ್ಲ, ದೇವಸ್ಥಾನಗಳಿಗೆ ಹೋಗುತ್ತಿದ್ದವನಲ್ಲ; ಈ ಲೋಪದ ಪರಿಣಾಮವೇನಿರುವುದೋ ?'' ಘನ ವಿದ್ವಾಂಸರೂ ಅವರ ಮಿತ್ರರೂ ಆಗಿದ್ದ ಶ್ರೀ ಸುಬ್ರಾಯ ಆಚಾರ್ಯರು ಅವರಿಗೆ ಹೀಗೆ ಉತ್ತರಿಸಿದರು: ''ಅಯ್ಯೋ ! ಇದೇನು ಮರುಳು ! ನಿಮ್ಮ ಬಾಳನ್ನು ಬಾಳಿದ ರೀತಿಯಿಂದಲೇ ನೀವು ಬಾಳಿನುದ್ದಕ್ಕೂ ಭಗವದಾರಾಧನೆಗೈದವರೆ !!'' ನಿವೃತ್ತಿ ವಿಶ್ರಾಂತಿಗಳನ್ನು ಬಯಸದೇ ವಿರಾಮವನ್ನರಿಯದೆ, ಪ್ರವೃತ್ತಿ ಮಾರ್ಗದಲ್ಲೇ ಇದ್ದು ಕೊನೆಯುಸಿರೆಳೆದ ಈ ಮಹಾ ತಪಸ್ವಿಗೆ ಇದು ನನ್ನ ನಮನ. ●



1960ರಲ್ಲಿ ಐಡಿಯಲ್ ಸ್ಟುಡಿಯೋದಲ್ಲಿ ತೆಗೆದ ಭಾವಚಿತ್ರದಲ್ಲಿ ಶ್ರೀ ಯು. ಪುಂಡಲೀಕ ಶೆಣೈಯವರು ತಮ್ಮ ಗಣ್ಯ ಆತ್ಮೀಯರೊಂದಿಗೆ

Sri Vidyabharathi Book Centre, Sringeri

CC-O. In Public Domain. Digitized by eGangotri



ಟ್ರಸ್ಟಿನ ವತಿಯಿಂದ ಮರುಮುದ್ರಿತವಾದ ದಿ। ಯು. ಪುಂಡಲೀಕ ಶೆಣೈಯವರು ಬರೆದ ಇಂಗ್ಲಿಷ್ - ಕನ್ನಡ ಬೋಧಿನಿ (ಭಾಗ 3), ಪುಸ್ತಕವನ್ನು ಶ್ರೀಮತಿ ಸಂಧ್ಯಾ ಸತೀಶ್ ಪೈ ಯವರು ತಾ. 25-12-1998ರಂದು ತೆಂಕಪೇಟೆಯ ''ವಾಸುದೇವ ಸದನ''ದಲ್ಲಿ ಬಿಡುಗಡೆ ಗೊಳಿಸಿದರು. (ಚಿತ್ರದಲ್ಲಿ ಎಡದಿಂದ ಶ್ರೀಮತಿ ಶಾಂತಾ ಪಾಂಡುರಂಗ ಶೆಣೈ, ಶ್ರೀಮತಿ ಸಂಧ್ಯಾ ಎಸ್. ಪೈ, ಶ್ರೀ ಟಿ. ನಾರಾಯಣ ಎಂ. ಪೈ, ಶ್ರೀ ಯು. ಹರೀಶ ಪಿ. ಶೆಣೈ)

Sri Vidyabharathi Book Centre, Sangod

CC-O. In Public Domain. Digitized by eGangotri

CC-O. In Public Domain. Digitized by eGangotri



ವಿ। ಯು. ಪುಂಡಲೀಕ ಶೆಣೈ ಯವರ 100ನೆಯ ಜನ್ಮದಿನೋತ್ಸವ ಕಾರ್ಯಕ್ರಮವನ್ನು
ತಾ. 17-4-1996ರಂದು ಉಡುಪಿಯ ತೆಂಕಪೇಟೆಯ "ವಾಸುದೇವ ಸದನ"ದಲ್ಲಿ
ಶ್ರೀಮತಿ ಯು. ಶಾಂತಾ ಪಾಂಡುರಂಗ ಶೆಣೈ (ಟ್ರಸ್ಟಿನ ಮೊಕ್ತೇಸರರು)
ದೀಪ ಬೆಳಗಿಸಿ ಉದ್ಘಾಟಿಸಿದ ಸಂದರ್ಭ

Sri Vidyabharathi Book Centre, Sringeri

CC-O. In Public Domain. Digitized by eGangotri

ಶ್ರೀ ಯು. ಪಿ. ಶೆಣೈ – ಒಂದು ಸ್ಮರಣೆ

– ಪ್ರೊ। ಉ. ಲ. ಆಚಾರ್ಯ
ನಿವೃತ್ತ ಅಧ್ಯಾಪಕ, ಎಂ.ಜಿ.ಎಂ. ಕಾಲೇಜು, ಉಡುಪಿ

ಪೂಜ್ಯ ಶ್ರೀ ಯು. ಪುಂಡಲೀಕ ಶೆಣೈಯವರು ಸ್ವರ್ಗಸ್ಥರಾಗಿ ಹತ್ತಿರ ಹತ್ತಿರ 25 ವರ್ಷಗಳು ಸಂದಿವೆ. ಆದರೆ, ಇದೀಗ ನಿವೃತ್ತರಾದ, ನಿವೃತ್ತರಾಗುತ್ತಲಿರುವ ಎಷ್ಟೋ ಮಂದಿ ಊರಲ್ಲಿನ, ಪರವೂರಲ್ಲಿನ ಜನರಿಗೆ ಇವರ ನೆನಪು ಅಳಿಸಿ ಹೋಗಿಲ್ಲ, ಕಾರಣ ಇಂಥ ಶ್ರದ್ಧಾವಂತ, ನಿಷ್ಠ, ಆತ್ಯುತ್ತಮ ಜೀವನದ ಮೌಲ್ಯಗಳನ್ನವಲಂಬಿಸಿ ಕೃತಾರ್ಥರಾದ ಜನ ಈಗಲೀಗ ಸಿಗುವುದು ದುರ್ಲಭವಾಗಿದೆ.

'ನಮ್ಮ ಸರವೇ 14 ಕ್ಯಾರೆಟ್ ಚಿನ್ನವನ್ನು ಒಪ್ಪಿಕೊಂಡು ಬಗ್ಗಿಸಿಕೊಂಡ, ನಂತರ ನಮ್ಮ ಜೀವನದ ಮೌಲ್ಯಗಳು 'ಕ್ಯಾರೆಟ್'ಗಳಲ್ಲಿ 10ಕ್ಕೂ ಇಳಿದಿದೆ' ಎಂದು ಅವರು ನನ್ನೊಡನೆ ಹತ್ತಾರು ಬಾರಿ ಹೇಳಿದುದು ಇದೆ. ಇದು ಸುಮಾರು 25 ವರ್ಷಗಳ ಹಿಂದೆ. ಈಗಲಾದರೂ ಏನು ಹೇಳಬಲ್ಲೆವು ?

ಇವರು ನನ್ನ ತೀರ್ಥರೂಪರಿಗಿಂತ ಬಹುಶಃ ಒಂದು ವರ್ಷ ದೊಡ್ಡವರು. ಇಬ್ಬರೂ ಉಡುಪಿಯ ಕ್ರಿಶ್ಚಿಯನ್ ಹೈಸ್ಕೂಲಿನಲ್ಲಿ ಕೊನೆಯ ಮೆಟ್ರಿಕ್ಯುಲೇಶನ್ ಪರೀಕ್ಷೆಗೆ ಓದಿದ ಸಹಪಾಠಿಗಳಂತೆ. ಇಬ್ಬರೂ ಉಪಾಧ್ಯಾಯರಾಗಿದ್ದರೂ ಪ್ರತ್ಯೇಕ ಶಾಲೆಗಳಲ್ಲಿ – ಅವರು ಪದವೀಧರ ಉಪಾಧ್ಯಾಯರು. ನನ್ನ ತಂದೆ ಸೆಕೆಂಡರಿ ಶಾಲಾ ಮಾಸ್ಟರರಾಗಿಯೂ ದುಡಿದವರು. ನಾನು ಉಡುಪಿಯ ಬೋರ್ಡ್ ಹೈಸ್ಕೂಲಿನಲ್ಲಿ ಕಲಿತ ಕಾರಣ ನಾನು ಇಲ್ಲಿ ಉಡುಪಿಯ ಕಾಲೇಜಿನಲ್ಲಿ ದುಡಿಯುವ ತನಕವೂ ಇವರೊಡನೆ ವಿಶೇಷ ಸಂಪರ್ಕ, ಸಲುಗೆಗಳಲ್ಲಿ ಇರಲಿಲ್ಲ.

ಇವರ ಕುಟುಂಬಿಕರಾದ ವೈದ್ಯ ಯು. ರತ್ನಾಕರ ಶೆಣೈ ಮತ್ತು ಶ್ರೀ ಯು. ವಿಠಲ ಶೆಣೈ ಇವರಿಬ್ಬರೂ ಉಡುಪಿಯ ಪ್ರಾಥಮಿಕ ಶಾಲೆಯಲ್ಲಿ ನನ್ನ ಸಹಪಾಠಿಗಳು. ಇವರ ಮೂಲಕ ಮತ್ತು ಇನ್ನಿತರ ಗೆಳೆಯ ಶ್ರೀ ಶ್ರೀನಿವಾಸ ಶ್ಯಾನುಭಾಗ, ಕೃಷ್ಣಯ್ಯ ಮೊದಲಾದವರ ಮೂಲಕ ಇವರ ವೃತ್ತಿ ನೈಪುಣ್ಯ, ಶ್ರದ್ಧೆಗಳನ್ನು ಚಿಕ್ಕಂದಿನಲ್ಲೇ ತಿಳಿದಿರುತ್ತೇನೆ. ಅಂದಿನಿಂದ ಕೊನೆಯ ತನಕವೂ ನನ್ನ ಮನದ ಪಟಲದಲ್ಲಿ ಗಣ್ಯರಾಗಿ ಉಳಿದವರು.

ಜೂನ್ 1951ರಲ್ಲಿ, ಇವರು ಕ್ರಿಶ್ಚಿಯನ್ ಹೈಸ್ಕೂಲಿನಿಂದ ನಿವೃತ್ತರಾಗಿ ಮಣಿಪಾಲದ ಹೈಸ್ಕೂಲಿಗೆ ಪ್ರಧಾನಾಧ್ಯಾಪಕರಾಗಿ ಸೇರಿದರು. ನಾನು ಸುಮಾರು

CC-O. In Public Domain. Digitized by eGangotri

ಅದೇ ಸಮಯ ಇಲ್ಲಿನ ಎಂ.ಜಿ.ಎಂ. ಕಾಲೇಜಿನಲ್ಲಿ ಕಲಿಸಲು ತೊಡಗಿದೆನು. ಅಂದಿನಿಂದ ವಿದ್ಯಾಭ್ಯಾಸ ಸಂಬಂಧವಾದ ಅನೇಕ ವಿಷಯಗಳಲ್ಲಿ ನಮ್ಮ ಸಾಹಚರ್ಯ ಕೊನೆಯತನಕವೂ ಇತ್ತು – ಇದಕ್ಕೆ ಮುಖ್ಯ ಕಾರಣ, ಡಾ। ಮಾಧವ ಪೈಗಳು, ನಮ್ಮಿಬ್ಬರಲ್ಲಿಯೂ ತೋರಿದ ನಂಬಿಕೆ, ಔದಾರ್ಯಗಳು ಎಂದು – ಖಡಾಖಂಡಿತವಾಗಿ ಹೇಳಬಲ್ಲೆ. ಎಷ್ಟೋ ವಿಷಯಗಳನ್ನು ಸ್ಕೂಲು, ಕಾಲೇಜು ನಿರ್ವಹಣೆಗಳ ಬಗ್ಗೆ ನಮ್ಮಿಬ್ಬರಲ್ಲಿಯೂ ಸಲಹೆಗಳನ್ನು ಡಾ। ಕೇಳಿದುದು ಇದೆ. ಇದಕ್ಕೆ ಕಾರಣ ಶ್ರೀ ಶೆಣೈಯವರ ಮೇಲೆ ಇದ್ದ ಅಪಾರ ನಂಬಿಕೆ, ಗೌರವಗಳಾದರೆ, ನನ್ನ ವಿಚಾರವಾಗಿ ನಾನು ಕೆಲವು ಸಂಸ್ಥೆಗಳ ಸ್ಥಾಪನೆಯ ಮುನ್ನ ಆವುಗಳ ರೂಪರೇಷೆಗಳ ಬಗ್ಗೆ ಮಾಹಿತಿಯನ್ನೊದಗಿಸುತ್ತಲಿದ್ದೆ. ನಾಲ್ಕು ಕಾಲೇಜುಗಳಲ್ಲಿ ಆಲ್ಲಲ್ಲಿನ ಪ್ರಯೋಗ ಶಾಲೆಗಳ ಸ್ಥಾಪನೆಗೆ ಬೇಕಾದ ಮಾಹಿತಿಗಳ ನ್ನೊದಗಿಸಿದ್ದೇನೆ. ಈ ಸೌಭಾಗ್ಯವನ್ನು ನನಗೆ ಡಾಕ್ಟರರು ಇತ್ತದ್ದು ನನಗೆ ಇವರು ಇತ್ತ ಮೊಡ್ಡ ಗೌರವವೆಂದು ನಂಬಿದ್ದೇನೆ.

ಮೆಡಿಕಲ್ ಮತ್ತು ಇಂಜಿನಿಯರಿಂಗ್ ಕಾಲೇಜುಗಳ ಸ್ಥಾಪನಾನಂತರದಲ್ಲಿ ಮುಖ್ಯವಾಗಿ 1960- 1961ರ ನಂತರ ಪ್ರವೇಶಕ್ಕೆ ನೂಕುನುಗ್ಗಲು ಆರಂಭವಾದಾಗ ಪ್ರವೇಶ ಪರೀಕ್ಷೆಯ ಪ್ರಶ್ನೆಪತ್ರಿಕೆಗಳ ತಯಾರಿ ಮತ್ತು ತಿದ್ದುವಿಕೆಗಳನ್ನು ಆಯಾಯ ಕಾಲೇಜುಗಳಿಗೆ ಒಪ್ಪಿಸುವ ಮೊದಲು ಶ್ರೀ ಶೆಣೈಯವರೂ, ನಾನೂ ತಯಾರಿಸಿ ಸಹಕರಿಸಿದ್ದೇವೆ ಎಂಬ ವಿಚಾರ ನನಗೆ ಆವರಿಗೆ ಮಾತ್ರ ತಿಳಿದಿತ್ತು. ಹೀಗೆ ಮೊದಮೊದಲು ನಮ್ಮಲ್ಲಿ ವಿಶೇಷ ಸಾಮೀಪ್ಯ ಸಲುಗೆಗಳಿಲ್ಲದಿದ್ದರೂ ಮುಂದೆ, ಇವರೊಡನೆ ದುಡಿಯುವ ಯೋಗ ಬಂದದ್ದು ನನ್ನ ಭಾಗ್ಯ.

ಇತರರಿಗಾಗಿಯೇ ತನ್ನ ಜೀವನದ ಉದ್ದಕ್ಕೂ ದುಡಿದ ಮಹಾನ್ ವ್ಯಕ್ತಿ ಶ್ರೀ ಶೆಣೈಯವರು ತಮ್ಮ ಮಾಸ್ತರಿಕೆಯ ದಿನಗಳಲ್ಲಿ ವಾರದ 35 ಪಿರಿಯಡುಗಳಲ್ಲಿ 29- 30ಕ್ಕಿಂತ ಕಡಿಮೆ ಪಾಠಗಳಿದ್ದದ್ದು ಕಡಿಮೆ. ಗಣಿತ, ಬೀಜಗಣಿತ, ಜ್ಯಾಮಿತಿ ಮತ್ತು ಇವುಗಳಲ್ಲಿನ ತಾದಾತ್ಮ್ಯಕ್ಕಿಂತಲೂ ಹೆಚ್ಚಿನ ವ್ಯಾಕರಣ (ಇಂಗ್ಲಿಷ್, ಕನ್ನಡ)ಕ್ಕಾಗಿ ಇವರು ದುಡಿದವರು. ಇಂಗ್ಲಿಷ್ ಕಲಿಸುತ್ತಿದ್ದರೇನೋ ಸಹಜ. ಆವರು ಕನ್ನಡ ವ್ಯಾಕರಣದ ವಿಚಾರವಾಗಿ ತಮ್ಮ ಸಹವರ್ತಿಗಳಾದ ಶ್ರೀ ಎ. ಸುಬ್ರಾಯ ಭಟ್ಟರು, ಶ್ರೀ ಕೆ. ವೆಂಕಟಾಚಲ ಭಟ್ಟರು ಮತ್ತು ಸಂಸ್ಕೃತ ತಿಳಿದಿದ್ದ ಎಲ್ಲ ಮಂದಿಯಲ್ಲೂ ವ್ಯಾಕರಣದ ವಿಚಾರವಾಗಿ ತರ್ಕಬದ್ಧವಾದ ವಿಶ್ಲೇಷಣೆ ನಡೆಸದ ದಿನಗಳಿಲ್ಲ. ಹೀಗೆ ಶ್ರದ್ಧಾಪೂರ್ವಕ ದುಡಿಮೆಯಿಂದ ಎಂದೂ ಹಿಮ್ಮೆಟ್ಟಿದವರಲ್ಲ.

Sri Vidyabharathi Book Centre, Sringeri

CC-O. In Public Domain. Digitized by eGangotri

ಶಾಲೆಯಲ್ಲಿ ಮಾತ್ರ ಇವರ ದುಡಿತ ಸೀಮಿತವಾಗಿದ್ದಿಲ್ಲ. ದಿನಾಲೂ ಬೆಳಗ್ಗೆ, ಸಂಜೆ ಮತ್ತು ಅನೇಕ ವರ್ಷ ಮದ್ರಾಸು ಮೆಟ್ರಿಕ್ಯುಲೇಷನ್ ಕಲಿಯುವ ಉಪಾಧ್ಯಾಯರು ಮತ್ತಿತರರ ಬಗ್ಗೆ ದುಡಿಯುವ ಇವರ ಹಂಬಲ ಹೇಳಲು ಬಾರದಷ್ಟು ಅಮಿತವಾಗಿತ್ತು. ಜೀವನದ ಉದ್ದಕ್ಕೂ ಇವರ ''ಅಧ್ಯಾಪನಯಜ್ಞ'' ಸಾಗಿತ್ತು ಎನ್ನುವುದರಲ್ಲಿ ಎರಡು ಮಾತಿಲ್ಲ.

ವಿವಿಧ ಕ್ಷೇತ್ರಗಳಲ್ಲಿ ಇವರ ದುಡಿತಕ್ಕಿಂತಲೂ ಇವರ ಇನ್ನೊಂದು ಗುಣವನ್ನು ನಾನು ಮೆಚ್ಚಿದವನು. ನಿವೃತ್ತರಾಗುವ ವೇಳೆಯೂ ಇನ್ನೂರರ ಪಗಾರ (ಇದರಲ್ಲಿ ತುಟ್ಟಿ ಭತ್ತೆಯೂ ಸೇರಿತ್ತು) ವನ್ನು ಕಂಡವರಲ್ಲ, ಆದರೂ ತನ್ನ ಹೊರಗಿನ ವಿದ್ಯಾರ್ಥಿಗಳಿಂದ ಚಿಕ್ಕಾಸನ್ನು ಪಡೆಯದ ಶ್ರೀ ಶೆಣೈಯವರು ಹತ್ತು ಹಲವಾರು ಮಕ್ಕಳಿಗೆ ಪುಸ್ತಕ, ಶಾಲಾ ಫೀಸುಗಳನ್ನು ಕೊಡುತ್ತಲಿದ್ದು, ತನ್ನ ಜೀವನವನ್ನೇ ವಿದ್ಯೆಗಾಗಿ, ವಿದ್ಯಾರ್ಥಿಗಳಿಗಾಗಿ ಧಾರೆಯೆರೆದಿದ್ದಾರೆ. ಹೊರ ತೋರಿಕೆಗೆ ಬಹಳ ಕಡಿಮೆ ಮಾತು, ವಿರಳ ನಗುಗಳ ಕಾರಣ ಬಿಗುವಿನ ಮನುಷ್ಯನೆಂದು ಕಂಡರೂ ಇವರ ಹೃದಯದ ಕರುಣೆಯ ಚಿಲುಮೆ ಯಾವತ್ತೂ ಜಾಗೃತವಾಗಿತ್ತು. ನೂರಾರು ಮಕ್ಕಳ ಜೀವನದಲ್ಲಿ ಇವರು 'ಬೆಳಕು' ತೋರಿಸಿದ ಮಹಾ ಪುಣ್ಯಶಾಲಿ, ಭಾಗ್ಯಶಾಲಿ ಕೂಡ.

ಇಂಥ ಮಹಾನುಭಾವರ ನೆನಹು ಮುಂದಿನ ಪೀಳಿಗೆಯವರಿಗೆ ದಾರಿದೀಪವಾದೀತೇ ?

Happy and contented

One day, while walking on a dry dusty road, Sheikh Sadi, the Persian poet, came upon a man breaking stones. The man looked tired and unhappy. A little further down the road, he came across another man engaged in the same activity but who appeared happy and contented. Upon enquiry, he learnt that the first man was making bricks to sell and the other to fulfil a desire to build a mosque.

‘ರಂಗಭೂಮಿ’ಯ ವತಿಯಿಂದ ಆಡಲಾದ ‘‘ಮಂಗಳಾ’’ ನಾಟಕಕ್ಕೆ
ಸಂಗೀತ ನಾಟಕ ಅಕಾಡಮಿಯಿಂದ ಪ್ರಥಮ ಬಹುಮಾನ – 1972ರಂದು ದೊರೆಯಿತು



ಚಿತ್ರದಲ್ಲಿ ರಂಗಭೂಮಿಯ ಉಪಾಧ್ಯಕ್ಷ ಶ್ರೀ ಯು. ಪ್ರುಂಡಲೀಕ ರೆಣ್ಣೆಯವರು ಪೌರಾಡಳಿತ ಸಚಿವ
ಶ್ರೀ ಬಿ. ಬಸವಲಿಂಗಪ್ಪನವರಿಂದ ಬಹುಮಾನ ಸ್ವೀಕರಿಸುತ್ತಿದ್ದಾರೆ.

Sri Vidyabharathi Book Centre, Sringeri

CC-O. In Public Domain. Digitized by eGangotri

CC-O. In Public Domain. Digitized by eGangotri

ನನ್ನ ಬದುಕಿನಲ್ಲಿ ಮರೆಯಲಾಗದ ಅನನ್ಯ ರಂಗಪ್ರೇಮಿ

ದಿ। ಯು. ಪುಂಡಲೀಕ ಶೆಣೈ

– ಶ್ರೀ ಕೆ. ಆನಂದ ಗಾಣಿಗ
ಪ್ರಧಾನ ಕಾರ್ಯದರ್ಶಿ, ರಂಗಭೂಮಿ (ರಿ.)
ಅಜ್ಜರಕಾಡು, ಉಡುಪಿ

ದಿವಂಗತ ಯು. ಪುಂಡಲೀಕ ಶೆಣೈಯವರು ನನ್ನ ಪಾಲಿಗೆ ಪ್ರಾತಃ ಸ್ಮರಣೀಯರು. ಅವರಲ್ಲವಾಗಿದ್ದರೆ ನಾನು ಓರ್ವ ರಂಗಕಲಾವಿದನಾಗಿ, ರಂಗಸಂಘಟಕನಾಗಿ ಮತ್ತು ಸಾಮಾಜಿಕ ಕಾರ್ಯಕರ್ತನಾಗಿ ರೂಪುಗೊಳ್ಳುತ್ತಿರಲಿಲ್ಲ. ನನ್ನ ಬದುಕಿನ ದಿಕ್ಕೇ ಬೇರೆಯಾಗುತ್ತಿತ್ತು. ಪ್ರಾಯಃ ಉಡುಪಿಯ 'ರಂಗಭೂಮಿ' ನಾಟಕ ಸಂಸ್ಥೆಯೂ ಇದುವರೆಗೆ ಮುಂದುವರಿಯುತ್ತಿರಲಿಲ್ಲವೋ ಏನೋ!

ನಾನು ಕೂಡಾ ಉಡುಪಿಯ ಕ್ರಿಶ್ಚಿಯನ್ ಹೈಸ್ಕೂಲಿನ ವಿದ್ಯಾರ್ಥಿಯಾಗಿದ್ದೆ. ಆದರೆ ನಾನು ಸೇರಿದ ಮರುವರ್ಷವೇ ಅವರು ಕ್ರಿಶ್ಚಿಯನ್ ಹೈಸ್ಕೂಲಿನಿಂದ ಸ್ವಯಂ ನಿವೃತ್ತಿ ಪಡೆದು ಹೊರಟುಹೋದುದರಿಂದ ಅವರಿಂದ ತರಗತಿಯಲ್ಲಿ ಪಾಠ ಹೇಳಿಸಿಕೊಳ್ಳುವ ಭಾಗ್ಯ ನನಗೆ ದೊರಕಲಿಲ್ಲ. ಆ ಕಾಲದಲ್ಲಿ ಉಡುಪಿ ಕ್ರಿಶ್ಚಿಯನ್ ಹೈಸ್ಕೂಲಿನ ನಾಟಕಗಳೆಂದರೆ ಸರ್ವಶ್ರೇಷ್ಠವೆಂಬ ಖ್ಯಾತಿ ಗಳಿಸಿತ್ತು. ಈ ಕೀರ್ತಿಗೆ ಕಾರಣರಾದ ಅಧ್ಯಾಪಕರ ಪೈಕಿ ಪುಂಡಲೀಕ ಶೆಣೈಯವರೂ ಒಬ್ಬರಾಗಿದ್ದರು. ಅವರು ನಾಟಕಗಳ ನಿರ್ದೇಶಕರಾಗಿರದಿದ್ದರೂ ನಾಟಕ ಪ್ರಯೋಗಗಳ ಯಶಸ್ಸಿಗೆ ತೆರೆಯ ಮರೆಯಲ್ಲಿದ್ದುಕೊಂಡೇ ಅಪಾರ ಶ್ರಮವಹಿಸುತ್ತಿದ್ದರು.

ಉಡುಪಿಯಲ್ಲೊಂದು ಹವ್ಯಾಸಿ ನಾಟಕ ಸಂಸ್ಥೆಯನ್ನು ಕಟ್ಟಬೇಕೆಂಬ ಉತ್ಸಾಹದಿಂದ ನಾನು ಉಡುಪಿಯ ಗಣ್ಯ ನಾಟಕಾಸಕ್ತರ ಸಭೆಯೊಂದನ್ನು ವಿಧ್ಯುಕ್ತವಾಗಿ ಏರ್ಪಡಿಸಿದೆ. ಸ್ವತಃ ರಂಗನಟರೂ, ಉಡುಪಿ ಕ್ರಿಶ್ಚಿಯನ್ ಹೈಸ್ಕೂಲಿನ ಹಳೆ ವಿದ್ಯಾರ್ಥಿಯೂ ಆಗಿದ್ದ ಶ್ರೀ ಎಸ್. ಎಲ್. ನಾರಾಯಣ ಭಟ್ಟರ "ರಾಯಭಾರಿ" ವಾರಪತ್ರಿಕೆಯ ಕಛೇರಿಯಲ್ಲಿ ತಾ. 20-6-1965ರಂದು ಸಭೆಯನ್ನು ಕರೆಯ

Sri Vidyabharathi Book Centre, Sringeri

CC-O. In Public Domain. Digitized by eGangotri

ಾಗಿತ್ತು. ಖ್ಯಾತ ನಾಟಕ ನಿರ್ದೇಶಕರೂ ಕ್ರಿಶ್ಚಿಯನ್ ಪೈಸ್ಕೂಲಿನ ಕನ್ನಡ ಪಂಡಿತರೂ ಆಗಿದ್ದ ವಿದ್ವಾನ್ ಕೆ. ವೆಂಕಟಾಚಲ ಭಟ್ಟರು ಸಭೆಯ ಅಧ್ಯಕ್ಷತೆ ವಹಿಸಿದ್ದ ಆಂದಿನ ಪ್ರಥಮ ಸಭೆಯಲ್ಲೇ ''ರಂಗಭೂಮಿ, ಉಡುಪಿ'' ಎಂಬ ಹೆಸರಿನಿಂದ ಸಂಸ್ಥೆಯು ಜನ್ಮ ತಾಳಿತು. ಉಡುಪಿಯಲ್ಲಿ ಹಿಂದೆ ನಾಟಕಗಳನ್ನಾಡುತ್ತಿದ್ದ ''ನಾಟ್ಯಕೂಟ'' ಎಂಬ ತಂಡದ ಕಲಾವಿದರಾಗಿ ಆ ಮೊದಲೇ ಜನಮನ್ನಣೆ ಗಳಿಸಿದ್ದ ಡಾ। ಕೆ. ಎಲ್. ಐತಾಳರು ಅಧ್ಯಕ್ಷರಾಗಿ, ಶ್ರೀ ಎಸ್. ಎಲ್. ನಾರಾಯಣ ಭಟ್ಟರು ಉಪಾಧ್ಯಕ್ಷರಾಗಿ, ನಾನು ಪ್ರಧಾನ ಕಾರ್ಯದರ್ಶಿಯಾಗಿ, ಸರ್ವಶ್ರೀ ಪಿ. ಸೀನ ಸೆಟ್ಟಿ, ಎ. ಜೆ. ಅಲ್ಬೆ, ಕೆ. ವೆಂಕಟಾಚಲ ಭಟ್ಟ, ಟಿ. ಪಿ. ಆಚಾರ್ಯ, ಶ್ರೀಮತಿ ಅನಸೂಯ ಬಿ. ಶೆಟ್ಟಿ, ಶ್ರೀಮತಿ ನಿರ್ಮಲಾ ವಿ. ಇನಾಂದಾರ್ ಮೊದಲಾದ ಉಡುಪಿಯ ಗಣ್ಯರು ಸದಸ್ಯರಾಗಿ ಉಳ್ಳ ಪ್ರಥಮ ಆಡಳಿತ ಮಂಡಳಿಯನ್ನು ಆಂದೇ ಅವಿರೋಧವಾಗಿ ಆಯ್ಕೆ ಮಾಡಲಾಯಿತು. ಮರುದಿನದ 'ನವಭಾರತ' ದಿನಪತ್ರಿಕೆಯಲ್ಲಿ ಈ ವಾರ್ತೆಯು ಪ್ರಕಟವಾಯಿತು. ಅದನ್ನೋದಿದ ಶ್ರೀ ಪುಂಡಲೀಕ ಶೆಣೈಯವರು ನೇರಾಗಿ ''ರಾಯಭಾರಿ'' ಆಫೀಸಿಗೆ ಬಂದು ''ರಂಗಭೂಮಿ''ಯ ಆಜೀವ ಸದಸ್ಯರಾಗಿ ಸ್ವಯಂ ನೋಂದಾಯಿಸಿಕೊಂಡರು. 1968ರಲ್ಲಿ ಅವರು 'ರಂಗಭೂಮಿ'ಯ ಉಪಾಧ್ಯಕ್ಷರಾದರು. ತನ್ನ ನಿಧನದವರೆಗೂ ಅದೇ ಸ್ಥಾನದಲ್ಲಿ ಮುಂದುವರಿದು, ಸಂಸ್ಥೆಯ ಒಂದು ಪ್ರಧಾನ ಆಧಾರ ಸ್ತಂಭವಾಗಿ ನಮ್ಮನ್ನು ಮುನ್ನಡೆಸಿದರು.

ಶ್ರೀ ಶೆಣೈಯವರು ತನ್ನ ವಿದ್ಯಾರ್ಥಿದೆಸೆಯಲ್ಲಿ ನಾಟಕಗಳಲ್ಲಿ ಅಭಿನಯಿಸಿರಬಹುದೋ ಏನೋ ! ಆದರೆ ಅವರು ಅಧ್ಯಾಪಕರಾದ ನಂತರ ಮುಖಕ್ಕೆ ಬಣ್ಣ ಹಚ್ಚಿದ್ದನ್ನು ಕಂಡವರು ಇದ್ದಂತಿಲ್ಲ. ಅವರು ನಟ, ನಿರ್ದೇಶಕ, ನಾಟಕಕಾರರಲ್ಲವಾಗಿದ್ದರೂ ಅವರಿಗಿದ್ದ ನಾಟಕ ಪ್ರೇಮ ಮಾತ್ರ ಅನನ್ಯವಾದುದು. 1965ರಿಂದ ಆರಂಭಗೊಂಡು ಶ್ರೀ ಶೆಣೈಯವರು ನಿಧನರಾದ 1976ರ ವರೆಗಿನ ಹತ್ತು ವರ್ಷಗಳ ಅವಧಿಯಲ್ಲಿ 'ರಂಗಭೂಮಿ' ತಂಡವು ಒಟ್ಟು 17 ನಾಟಕಗಳನ್ನು ಸಿದ್ಧಗೊಳಿಸಿ ಅವುಗಳ ನೂರಾರು ಪ್ರದರ್ಶನಗಳನ್ನು ರಾಜ್ಯದಾದ್ಯಂತ ನೀಡಿತ್ತು. ಪ್ರತಿಯೊಂದು ನಾಟಕಕ್ಕೂ ಒಂದರಿಂದ ಒಂದೂವರೆ ತಿಂಗಳ ಕಾಲ ರಿಹರ್ಸಲ್ ನಡೆಸಲಾಗುತ್ತಿತ್ತು. ಈ ಎಲ್ಲಾ ರಿಹರ್ಸಲುಗಳಲ್ಲೂ ಶ್ರೀ ಶೆಣೈಯವರು ಹಾಜರಿರುತ್ತಿದ್ದರು. ನಾಟಕದಲ್ಲಿನ ಭಾಷಾದೋಷ ಮತ್ತು ವ್ಯಾಕರಣ ದೋಷಗಳನ್ನು ಅವರು ತಿದ್ದುತ್ತಿದ್ದರು. ನಿರ್ದೇಶಕರಾದ ವಿದ್ವಾನ್ ವೆಂಕಟಾಚಲ ಭಟ್ಟರಿಗೆ ಕೂಡಾ ಗೋಚರವಾಗದ ತಪ್ಪುಗಳನ್ನು ಅವರು ಎತ್ತಿ ತೋರಿಸುತ್ತಿದ್ದರು. ಪಾತ್ರಧಾರಿಯ ಮಾತು

Sri Vidyabharathi Book Centre, Sringeri

CC-O. In Public Domain. Digitized by eGangotri

ಸ್ಪಷ್ಟವಾಗಿರಬೇಕು, ಮಾತಿಗೆ ತಕ್ಕ ಮುಖಭಾವವಿರಬೇಕು, ರಂಗಚಲನೆ ಅವರಿಗೆ ಸರಿಕಾಣದಿದ್ದರೆ ''ಭಟ್ಟರೇ ಅದು ಸರಿಯಾಗಲಿಲ್ಲ, ನೀವು ಮಾಡಿ ತೋರಿಸಿ'' ಎಂದು ವೆಂಕಟಾಚಲ ಭಟ್ಟರಿಗೆ ಸೂಚನೆ ನೀಡುತ್ತಿದ್ದರು. ಶ್ರೀ ಶೆಣೈಯವರು ಓರ್ವ ಭಾವಜೀವಿ. ಹಾಸ್ಯ ಸನ್ನಿವೇಶಗಳಲ್ಲಿ ಗಟ್ಟಿಯಾಗಿ ನಗುತ್ತಿದ್ದರು. ಹಾಗೆಯೇ ದುಃಖದ ದೃಶ್ಯಗಳಲ್ಲಿ ತನಗೆ ಬಂದ ಕಣ್ಣೀರನ್ನು ಗುಟ್ಟಾಗಿ ಒರಸಿಕೊಳ್ಳುತ್ತಿದ್ದರು. ಅಭಿನಯ ಮತ್ತು ಸಂಗೀತವನ್ನು ಅವರು ತುಂಬಾ ಮೆಚ್ಚುತ್ತಿದ್ದರು. ಉಡುಪಿಗೆ ಬಂದ ಯಾವುದೇ ಸಿನೇಮಾವನ್ನು ಅವರು ನೋಡದೇ ಇರುತ್ತಿರಲಿಲ್ಲ. ಸಿನೆಮಾ ಚೆನ್ನಾಗಿರದಿದ್ದರೆ ಕೂತಲ್ಲೇ ನಿದ್ದೆ ಮಾಡುತ್ತಿದ್ದರಂತೆ ಹೊರತು ಮಧ್ಯದಲ್ಲೇ ಎದ್ದು ಬರುತ್ತಿರಲಿಲ್ಲ. ಅವರು ಯಕ್ಷಗಾನವನ್ನು ಮೆಚ್ಚುತ್ತಿರಲಿಲ್ಲ ಹಾಗೂ ನೋಡುತ್ತಿರಲಿಲ್ಲ. ಪ್ರಾಯಶಃ ಯಕ್ಷಗಾನವು ವಾಸ್ತವ ಲೋಕಕ್ಕೆ ಸಂಬಂಧಿಸಿದ್ದಲ್ಲ ಎಂಬ ನಿಲುವು ಅವರದ್ದಾಗಿರಬೇಕು.

ಶ್ರೀ ಪುಂಡಲೀಕ ಶೆಣೈಯವರಿಗೆ 'ರಂಗಭೂಮಿ' ತಂಡದ ಕಲಾವಿದರ ಬಗ್ಗೆ ಅಪಾರ ಅಭಿಮಾನವಿತ್ತು. ನಮ್ಮೆಲ್ಲರನ್ನೂ ತನ್ನ ಮಕ್ಕಳಂತೆ ಪ್ರೀತಿಸುತ್ತಿದ್ದರು. ಕಲಾವಿದರ ಪೈಕಿ ಯಾರಿಗಾದರೂ ಬೇರೆ ಊರಿಗೆ ವರ್ಗವಾದರೆ ತನ್ನ ಪತಿಯಿಂದ ವಿದಾಯ ಕೂಟ ಏರ್ಪಡಿಸುತ್ತಿದ್ದರು. ಆರ್ಥಿಕ ಸಂಕಷ್ಟವೊದಗಿದರೆ ಸಹಾಯ ಬೇಕೇ ಎಂದು ವಿಚಾರಿಸುತ್ತಿದ್ದರು. ಕಲಾವಿದರ ಪೈಕಿ ಯಾರಿಗಾದರೂ ಮದುವೆಯಾದರೆ ಕವರಿನಲ್ಲಿ ಒಂದಷ್ಟು ಹಣ (ನೋಟು) ಹಾಕಿ, ಇದನ್ನು ಮದುಮಗನಿಗೆ ಕೊಡಿರೆಂದು ನನಗೆ ಒಪ್ಪಿಸುತ್ತಿದ್ದರು. ನೀವೇ ಬಂದು ಯಾಕೆ ಸ್ವತಃ ಕೊಡಬಾರದು ಎಂದು ಕೇಳಿದಾಗ ''ನಿಮಗೆ ಗೊತ್ತಲ್ಲಾ ಗಾಣಿಗರೇ, ನಾನು ಬ್ರಹ್ಮಚಾರಿ. ಮದುವೆ ಸಮಾರಂಭಗಳಿಗೆ ಹೋಗುವುದಿಲ್ಲ'' ಅನ್ನುತ್ತಿದ್ದರು. ಯಾಕೆ ಹೋಗಬಾರದು ಎಂದು ವಿಚಾರಿಸಿದರೆ, ''ಬ್ರಹ್ಮಚಾರಿಯಾದ ನಾನು ದಂಪತಿಗಳಿಗೆ ಏನೆಂದು ಆಶೀರ್ವದಿಸುವುದು?'' ಎಂದು ನನ್ನನ್ನೇ ಪ್ರಶ್ನಿಸುತ್ತಿದ್ದರು. ಈ ವಿಚಾರವನ್ನು ನಾನು ನಿರ್ದೇಶಕ ಶ್ರೀ ವೆಂಕಟಾಚಲ ಭಟ್ಟರಿಗೆ ತಿಳಿಸಿದೆ. ಕೊನೆಗೇ ಅವರೇ ಶೆಣೈಯವರಿಗೆ ಸಮಾಧಾನ ಹೇಳಿದರು. ''ಉಡುಪಿ ಅಷ್ಟಮಠಗಳ ಸ್ವಾಮಿಗಳೂ ಬ್ರಹ್ಮಚಾರಿಗಳು. ಆದರೆ ಅವರು ನೂತನ ದಂಪತಿಗಳನ್ನು ಆಶೀರ್ವದಿಸುತ್ತಾರೆ. ಪುರಾಣ ಕಾಲದಲ್ಲೂ ಬ್ರಹ್ಮಚಾರಿ ಯತಿಗಳು ನವದಂಪತಿಗಳನ್ನು ಆಶೀರ್ವದಿಸುತ್ತಿದ್ದರು'' ಎಂದು ಸೋದಾಹರಣವಾಗಿ ವಿವರಿಸಿದಾಗ ಶೆಣೈಯವರಿಗೆ ಸಮಾಧಾನವಾದಂತೆ ಕಂಡು ಬಂದಿತು. ಆ ಬಳಿಕ ನಡೆದ 'ರಂಗಭೂಮಿ' ಕಲಾವಿದರ ಮದುವೆ ಸಮಾರಂಭಗಳಿಗೆ ಅವರು ಸ್ವತಃ ಬಂದು ಉಡುಗೊರೆಗಳನ್ನು ನೀಡುತ್ತಿದ್ದರು.

CC-O. In Public Domain. Digitized by eGangotri

ಉಡುಪಿಯ 'ರಂಗಭೂಮಿ' ಸಂಸ್ಥೆಯು ಸ್ಥಾಪನೆಯಾದಂದಿನಿಂದ ಇಂದಿನ ವರೆಗೂ (36 ವರ್ಷ) ನಿರಂತರವಾಗಿ ನಾನದರ ಪ್ರಧಾನ ಕಾರ್ಯದರ್ಶಿಯಾಗಿ ದುಡಿಯುತ್ತಿದ್ದೇನೆ. ನನ್ನ ಈ ಸಾಂಸ್ಕೃತಿಕ ಬದುಕಿನ ಇತಿಹಾಸದಲ್ಲಿ ಶ್ರೀ ಪುಂಡಲೀಕ ಶೆಣೈಯವರಿಗೆ ಸಂಬಂಧಿಸಿದ ನಾನು ಮರೆಯಲಾಗದ ಘಟನೆಗಳು ಅನೇಕ ಇವೆ. ಆ ಪೈಕಿ ಕೆಲವನ್ನು ಮಾತ್ರ ಇಲ್ಲಿ ನಮೂದಿಸಬಯಸುತ್ತೇನೆ :

ಹದಿಹರೆಯದ ಬಡ ಬ್ರಾಹ್ಮಣ ಹುಡುಗನೊಬ್ಬನು ನಮ್ಮ ನಾಟಕಗಳಲ್ಲಿ ಹೆಣ್ಣು ಪಾತ್ರಗಳನ್ನು ಮಾಡುತ್ತಿದ್ದನು. ಎರಡು ಹೊತ್ತಿನ ಊಟಕ್ಕೂ ಗತಿಯಿಲ್ಲದ ಆ ಹುಡುಗನು ಶ್ರೀಕೃಷ್ಣ ಮಠದಲ್ಲಿ ಊಟ ಮಾಡಿಕೊಂಡು ಸಂಜೆಯ ಹೊತ್ತು ದೇವರ ಮುಂದೆ ''ಪಾಲಯಾಚ್ಯುತ....'' ಹಾಡಿ, ಮನೆಗೆ ಹೋಗುತ್ತಿದ್ದನು. ಆತ ರಂಗದ ಮೇಲೆ ಹೆಣ್ಣು ವೇಷ ಧರಿಸಿ ಬಂದನೆಂದರೆ, ಅವನ ರೂಪ ಧ್ವನಿ ಹಾಡುಗಾರಿಕೆಗಳಿಂದಾಗಿ ಸಾಕ್ಷಾತ್ ಹೆಣ್ಣೇ ಆಗುತ್ತಿದ್ದನು. S.S.L.C. ಪಾಸಾಗಿದ್ದ ಆತನಿಗೆ ವಿದ್ಯೆ ಮುಂದುವರಿಸುವ ಶಕ್ತಿಯಿಲ್ಲ. ಹೆತ್ತವರನ್ನು ಮತ್ತು ಒಡಹುಟ್ಟಿದವರನ್ನು ಪೋಷಿಸುವ ದಾರಿಯೂ ಇಲ್ಲ. ಅವನ ದೈನ್ಯಾವಸ್ಥೆಯನ್ನು ನಾನು ಶೆಣೈಯವರ ಮುಂದೆ ವಿವರಿಸಿದಾಗ ಅವರ ಮನ ಕರಗಿತು. ಮರುದಿನವೇ ನನ್ನೊಂದಿಗೆ ಆ ಯುವಕನನ್ನು ಸಿಂಡಿಕೇಟ್‌ಬ್ಯಾಂಕಿನ ಆಗಿನ ಅಧ್ಯಕ್ಷರ ಬಳಿ ಕರೆದೊಯ್ದು, 'ರಂಗಭೂಮಿ' ಸಂಸ್ಥೆಯ ಕಲಾವಿದನೆಂಬ ನೆಲೆಯಲ್ಲಿ ಆತನಿಗೆ ನೌಕರಿ ಕೊಡಬೇಕೆಂದು ಕೇಳಿಕೊಂಡರು. ಶ್ರೀ ಶೆಣೈ ಅವರ ಕೋರಿಕೆಯನ್ನು ನಿರಾಕರಿಸಲಾಗದ ಬ್ಯಾಂಕಿನ ಅಧ್ಯಕ್ಷರು ಒಂದು ತಿಂಗಳೊಳಗೆ ಆ ಯುವಕನಿಗೆ ನೌಕರಿ ನೀಡಿದರು. ಆತನಂತೂ ಬ್ಯಾಂಕು ನೌಕರಿಯನ್ನು ಮಾಡುತ್ತಾ, ನಮ್ಮ ನಾಟಕಗಳಲ್ಲಿ ಅಭಿನಯಿಸುತ್ತಾ, ತನ್ನ ವಿದ್ಯಾಭ್ಯಾಸವನ್ನು ಖಾಸಗಿಯಾಗಿ ಮುಂದುವರಿಸಿ, ಉನ್ನತ ಪದವಿಗಳನ್ನು ಗಳಿಸಿ, ನೌಕರಿಯಲ್ಲಿ ಭಡ್ತಿಗಳನ್ನು ಪಡೆದು, ಈಗ ಅಮೇರಿಕಾದಲ್ಲಿ ಅಲ್ಲಿಯ ಬ್ಯಾಂಕೊಂದರ ಉನ್ನತ ಅಧಿಕಾರಿಯಾಗಿ ವಿಜೃಂಭಿಸುತ್ತಿದ್ದಾರೆ. ಆತ, ಶ್ರೀ ಪುಂಡಲೀಕ ಶೆಣೈಯವರನ್ನು ಮತ್ತು 'ರಂಗಭೂಮಿ' ಸಂಸ್ಥೆಯನ್ನು ಜೀವನ ಪರ್ಯಂತ ಮರೆಯಲಾರರು.

ಮಣಿಪಾಲದ ಬ್ರಹ್ಮ ಡಾ। ಟಿ.ಎಂ.ಎ. ಪೈಗಳು ಶಾಲಾಕಾಲೇಜುಗಳ ನಾಟಕ ಪ್ರದರ್ಶನಗಳನ್ನು ಹೊರತುಪಡಿಸಿ, ಬೇರಾವುದೇ ಹವ್ಯಾಸಿ ತಂಡಗಳ ನಾಟಕಗಳನ್ನು ನೋಡಿದವರಲ್ಲ. ಶ್ರೀ ಪುಂಡಲೀಕ ಶೆಣೈಯವರ ಒತ್ತಾಸೆಯ ಮೇರೆಗೆ ಡಾ। ಪೈಗಳು ನಮ್ಮ ತಂಡದ ''ಮಂಗಳಾ'' ನಾಟಕದ ಪ್ರಯೋಗವನ್ನು ಮಣಿಪಾಲದ ಕೆ.ಎಂ.ಸಿ. ಆಡಿಟೋರಿಯಂನಲ್ಲಿ ತಾ. 18-2-1968ರಂದು ಏರ್ಪಡಿಸಿದ್ದರು. ಅವರು ತನ್ನ

Sri Vidyabharathi Book Centre, Sringeri

CC-O. In Public Domain. Digitized by eGangotri

ಕೊನೆಯ ಪುತ್ರಿಯೊಂದಿಗೆ ಆಗಮಿಸಿ ಪ್ರೇಕ್ಷಾಗೃಹದ ಮುಂದಿನ ಸಾಲಿನಲ್ಲಿ ಕುಳಿತ್ತಿದ್ದರು. ನಾಟಕದ ಮಧ್ಯೆ ನಾನು ಪರದೆಯ ಸಂದಿನಲ್ಲಿ ಇಣುಕಿ ನೋಡುವಾಗ ಅವರ ಪುತ್ರಿ ಧಾರಾಕಾರ ಅಳುತ್ತಿದ್ದರು. ನಾಟಕ ಮುಗಿಯುತ್ತಲೇ ಡಾ। ಪೈಗಳು ರಂಗದ ಮೇಲೆ ಧಾವಿಸಿ ಬಂದು ''ಉಡುಪಿಯಲ್ಲಿ ಇಷ್ಟೊಂದು ಶ್ರೇಷ್ಠ ಮಟ್ಟದ ಹವ್ಯಾಸಿ ನಾಟಕ ತಂಡವೊಂದು ಇದೆಯೆಂಬುದೇ ನನಗೆ ತಿಳಿದಿರಲಿಲ್ಲ, ನಾಟಕದಲ್ಲಿ ಇಷ್ಟೊಂದು ನೈಜವಾಗಿ ಅಭಿನಯಿಸಲು ಸಾಧ್ಯವೇ ಎಂದು ನಾನು ವಿಸ್ಮಯ ಗೊಂಡಿದ್ದೇನೆ. ಈ ನಾಟಕವು ನಿಜವಾಗಿಯೂ ರಾಷ್ಟ್ರಪ್ರಶಸ್ತಿ ನೀಡಬೇಕಾದಷ್ಟು ಶ್ರೇಷ್ಠ ಮಟ್ಟದಲ್ಲಿ ಅಭಿನಯಿಸಲ್ಪಟ್ಟಿದೆ. ಇಂತಹ ಒಂದು ಅದ್ಭುತ ಪ್ರಯೋಗವನ್ನು ನೋಡುವುದಕ್ಕೆ ಅವಕಾಶ ಮಾಡಿಕೊಟ್ಟ ಶ್ರೀ ಪುಂಡಲೀಕ ಶೆಣೈಯವರಿಗೆ ನನ್ನ ಅಭಿನಂದನೆಗಳು'' ಅಂದರು. ಆ ಬಳಿಕ ಉಡುಪಿ ಲಾ ಕಾಲೇಜಿನ ಬಯಲು ರಂಗಮಂಟಪದಲ್ಲಿ ನಮ್ಮ ನಾಟಕ ಪ್ರದರ್ಶನಗಳನ್ನು ನಡೆಸುವ ಅವಕಾಶವನ್ನು ಡಾ। ಪೈಗಳು ಪುಕ್ಕಟೆಯಾಗಿ ಒದಗಿಸುವಂತೆ ಮಾಡಿದರು. ಈಗ ಆ ರಂಗಮಂಟಪವು ಡಾ। ಟಿ.ಎಂ.ಎ. ಪೈ ಆಸ್ಪತ್ರೆಯಾಗಿ ಪರಿವರ್ತನೆಗೊಂಡಿದೆ. ಆದರೆ ಆಸ್ಪತ್ರೆಯ ಪ್ರಾಂಗಣವನ್ನು ನೋಡುತ್ತಿರುವಾಗ ಈಗಲೂ ನನಗೆ ದಿ। ಪುಂಡಲೀಕ ಶೆಣೈ ಅವರ ನೆನಪೇ ಆಗುತ್ತದೆ.

ಖ್ಯಾತ ಚಲನಚಿತ್ರ ಕಲಾವಿದ ಟಿ. ಎನ್. ಬಾಲಕೃಷ್ಣರು ಫೆಬ್ರವರಿ 1968ರಲ್ಲಿ ಉಡುಪಿಗೆ ಬಂದು, ತನ್ನ ನಿಯೋಜಿತ 'ಅಭಿಮಾನ್' ಸ್ಟುಡಿಯೋ ನಿರ್ಮಾಣಕ್ಕೆ ತಲಾ. ರೂ. 100/-ರಂತೆ ದೇಣಿಗೆ ನೀಡಿರಿ; ಐದು ವರ್ಷಗಳ ಬಳಿಕ ಎಲ್ಲರಿಗೂ ಬಡ್ಡಿ ಸಮೇತ ಹಿಂದಿರುಗಿಸುತ್ತೇನೆ ಎಂಬ ಕೋರಿಕೆ ಮಂಡಿಸಿದರು. ನಾಟಕ-ಸಿನೇಮಾ ಎರಡೂ ರಂಗಗಳಲ್ಲಿ ಶ್ರೇಷ್ಠ ಕಲಾವಿದರೆಂಬ ಕೀರ್ತಿ ಗಳಿಸಿದ್ದ ಬಾಲಕೃಷ್ಣರು ಉಡುಪಿಯಿಂದ ಬರಿಗೈಯಲ್ಲಿ ಹಿಂತಿರುಗುವಂತಾಗಬಾರದೆಂಬ ಆಶಯ ಹೊಂದಿದ್ದ ಪುಂಡಲೀಕ ಶೆಣೈಯವರು ''ರಂಗಭೂಮಿ'' ಮತ್ತು ತಾನು ನಿರ್ದೇಶಕರಾಗಿದ್ದ ಶ್ರೀ ರಾಮಕೃಷ್ಣ ಥಿಯೇಟರ್ಸ್' ಈ ಎರಡೂ ಸಂಸ್ಥೆಗಳ ಜಂಟಿ ವ್ಯವಸ್ಥಾಪಕತ್ವದಲ್ಲಿ ತಾ. 20-2-1968ರಂದು ಶ್ರೀ ಟಿ. ಎನ್. ಬಾಲಕೃಷ್ಣರ ಸನ್ಮಾನ ಕಾರ್ಯಕ್ರಮವನ್ನು ಉಡುಪಿಯಲ್ಲಿ ಏರ್ಪಡಿಸುವ ವ್ಯವಸ್ಥೆ ಮಾಡಿದರು. 'ರಂಗಭೂಮಿ'ಯೂ ಸೇರಿದಂತೆ ಹಲವಾರು ಸಂಘ-ಸಂಸ್ಥೆಗಳು ಶ್ರೀ ಬಾಲಕೃಷ್ಣರಿಗೆ ತಲಾ ರೂ. 100/-ರಂತೆ ದೇಣಿಗೆ ನೀಡಿದರು. ಶ್ರೀ ಶೆಣೈಯವರೂ ಆಫೋಷಿತ ಮೊತ್ತ ನೀಡಿದರು. ಬಾಲಕೃಷ್ಣರಿಗೆ ಉಡುಪಿಯಲ್ಲಿ ಗಣನೀಯ ಮೊತ್ತ ಸಂಗ್ರಹವಾಯಿತು. ಸನ್ಮಾನ ಸಮಾರಂಭವೂ ವಿಜೃಂಭಣೆಯಿಂದ ನಡೆಯಿತು. ಆದರೆ

CC-O. In Public Domain. Digitized by eGangotri

ದೇಣಿಗೆ ನೀಡಿದವರಾರಿಗೂ ಬಡ್ಡಿ ಬಿಡಿ, ಅಸಲು ಕೂಡಾ ಮರಳಿ ಬರಲಿಲ್ಲ. 'ಅಭಿಮಾನ್' ಸ್ಟುಡಿಯೋವಂತೂ ನಿರ್ಮಾಣವಾಯಿತು. ಬಾಲಕೃಷ್ಣರು ಇಹಲೋಕ ತ್ಯಜಿಸಿದರು. ಆದರೆ ಖ್ಯಾತ ಕಲಾವಿದ ಟಿ. ಎನ್. ಬಾಲಕೃಷ್ಣರಿಗೆ ಉಡುಪಿಯಲ್ಲಿ ರತ್ನಗಂಬಳಿ ಹಾಸಿ ಸ್ವಾಗತ ನೀಡಿದವರು ಶ್ರೀ ಪುಂಡಲೀಕ ಶೆಣೈ ಎಂಬುದನ್ನು ಈಗ ಯಾರೂ ಆರಿತಿಲ್ಲ.

ತಾ. 9-5-1970ರಂದು ಉಡುಪಿಯ ವಿ.ಜೆ.ಯು.ಸಿ. ರಂಗಮಂಟಪದಲ್ಲಿ 'ರಂಗಭೂಮಿ' ಸಂಸ್ಥೆಯ ಆಶ್ರಯದಲ್ಲಿ ಸಿನೆಮಾ ನಟ ಕಲ್ಯಾಣಕುಮಾರ್ ಮತ್ತು ಬಳಗದವರಿಂದ ''ಚಿಕ್ಕಮ್ಮ'' ನಾಟಕ ಪ್ರದರ್ಶನ. ಕಲ್ಯಾಣಕುಮಾರ್ ಮತ್ತವರ ಪತ್ನಿ ರೇವತಿ ಪ್ರಧಾನ ಭೂಮಿಕೆಯಲ್ಲಿ ಕಾಣಿಸಿಕೊಳ್ಳಲಿದ್ದಾರೆಂದು ಪ್ರಚಾರ ಪಡಿಸಲಾಗಿತ್ತು. ಇನ್ನೇನು, ನಾಟಕ ಪ್ರಾರಂಭವಾಗುತ್ತದೆ ಅನ್ನುವಷ್ಟರಲ್ಲಿ ಭಯಂಕರ ಗಾಳಿ ಮಳೆ ಬಂದು ನಾಟಕ ಪ್ರದರ್ಶನ ರದ್ದುಗೊಂಡಿತು. ಕಿಕ್ಕಿರಿದು ಸೇರಿದ್ದ ಜನಸಂದಣಿ ಚದರಿಹೋಯಿತು. ಅನಿರೀಕ್ಷಿತ ಮಳೆಯಲ್ಲಿ ನೆನೆದುಕೊಂಡೇ ಮನೆಗೆ ಹೋಗಿದ್ದ ಪುಂಡಲೀಕ ಶೆಣೈಯವರು ತನ್ನ ಕೊಡೆ ಹಿಡಿದುಕೊಂಡು ಪುನಃ ಓಡೋಡಿ ಬಂದರು. ನನ್ನನ್ನು ಕರೆದು, ''ಗಾಣಿಗರೇ ಮಳೆ ಬಂದದ್ದರಿಂದ ಗೇಟ್ ಕಲೆಕ್ಷನ್ ಆಗಿರಲಿಕ್ಕಿಲ್ಲ. ಆದರೆ ನಾಟಕ ತಂಡದವರು ಹಣ ಕೇಳದೆ ಬಿಡಲಿಕ್ಕಿಲ್ಲ. ಏನು ಮಾಡ್ತೀರಿ ? ಹಣ ಬೇಕಿದ್ರೆ ಹೇಳಿ. ನಾನು ತಂದು ಕೊಡ್ತೇನೆ'' ಅಂದರು. ಸಂಸ್ಥೆಯ ಅಧ್ಯಕ್ಷರು ಇದಾವುದರ ಬಗ್ಗೆಯೂ ಯೋಚಿಸದೆ ಮಳೆ ಬಂದಾಗಲೇ ತನ್ನ ಕಾರಿನಲ್ಲಿ ಮನೆಗೆ ಹೋಗಿದ್ದರು. ಆದರೆ ಈ ವಯೋವೃದ್ಧ ಉಪಾಧ್ಯಕ್ಷರು ಸಂಸ್ಥೆಯ ಮರ್ಯಾದೆ ಹೋಗಬಾರದೆಂಬ ಕಾಳಜಿಯಿಂದ ಮಳೆಯಲ್ಲೇ ಪುನಃ ಓಡಿ ಬಂದಿದ್ದರು. ನನಗರಿವಿಲ್ಲದಂತೆ ನನ್ನ ಕಣ್ಣು ತೇವಗೊಂಡಿತು. ನಾನುತ್ತರಿಸಿದೆ – ''ಸಾರ್, ಗೇಟ್ ಕಲೆಕ್ಷನ್ ಆಗದಿದ್ದರೆ ಬೇಕಾದೀತೆಂಬ ಮುಂದಾಲೋಚನೆಯಿಂದ ನನಗೆ ನಿನ್ನೆ ಎಲ್.ಐ.ಸಿ.ಯಿಂದ ದೊರಕಿದ್ದ ಬೋನಸ್ ಹಣವನ್ನು ನಾನು ಬರುವಾಗಲೇ ತಂದಿದ್ದೇನೆ, ನೀವು ನಿಶ್ಚಿಂತೆಯಿಂದ ಮನೆಗೆ ಹೋಗಿರಿ'' ಎಂದು ಹೇಳುವಾಗ ನನಗೆ ಅಳುವುಕ್ಕಿ ಬಂತು. ಅಂದು ನಾಟಕ ತಂಡದವರು ಹಣ ಕೇಳಲಿಲ್ಲ. ಮೇ 12ರಂದು ನಾಟಕದ ಪ್ರದರ್ಶನವಾಯಿತು. ಅಂದು ಕಲೆಕ್ಷನ್ನೂ ಆಯಿತು. ತಂಡದವರಿಗೆ ನಿಗದಿತ ಹಣವನ್ನು ಪಾವತಿ ಮಾಡಿದೆವು. ಆದರೆ ಇಂದಿಗೂ ನನಗೆ ''ಚಿಕ್ಕಮ್ಮ'' ನಾಟಕದ ನೆನಪಾಗುವಾಗ, ನನ್ನ ಸ್ಮೃತಿಪಟಲದಲ್ಲಿ ಕಾಣಿಸುವವರು ದಿ। ಪುಂಡಲೀಕ ಶೆಣೈ ಅವರು.

ಜೀವವಿಮಾ ನಿಗಮದ ನನ್ನ ನೌಕರಿಯಲ್ಲಿ ನನಗೆ ಭಡ್ತಿ ಪಡೆಯುವ ಅವಕಾಶ ಹಲವು ಬಾರಿ ಬಂದಿತ್ತು. ಭಡ್ತಿ ಸ್ವೀಕರಿಸಿದರೆ ಪರವೂರಿಗೆ ವರ್ಗಾವಣೆ ಅನಿವಾರ್ಯ.

CC-O. In Public Domain. Digitized by eGangotri
ಹಾಗಾಗಿ ಪ್ರತಿ ಬಾರಿಯೂ ಭಡ್ತಿಯನ್ನು ನಿರಾಕರಿಸುತ್ತಲೇ ಬಂದಿದ್ದೆ. 1970ರಲ್ಲಿ ನನಗೆ ಅಭಿವೃದ್ಧಿ ಅಧಿಕಾರಿಯಾಗಿ ಭಡ್ತಿಹೊಂದುವ ಅವಕಾಶ ದೊರಕಿತ್ತು. ನನ್ನ ಪ್ರತಿಭೆ ಮತ್ತು ಪ್ರಾಮಾಣಿಕತೆಗಳನ್ನು ಅರಿತಿದ್ದ ಆಗಿನ ಉಡುಪಿ ಎಲ್.ಐ.ಸಿ. ಡಿವಿಜನಲ್ ಮೆನೇಜರರು ನನ್ನನ್ನು ಕರೆದು ''ನಿಮ್ಮ ಪ್ರತಿಭೆ ಕೇವಲ ಟೇಬಲ್ ವರ್ಕ್ ಮಾಡುವುದಕ್ಕೆ ಸೀಮಿತವಾದುದಲ್ಲ. ನೀವು ಅಭಿವೃದ್ಧಿ ಅಧಿಕಾರಿಯಾಗಿ ತೆರಳಿದರೆ ನಿಮಗೆ ಉತ್ಕಟ ಭವಿಷ್ಯವಿದೆ'' ಅಂದರು. ನನಗೂ ಮನಸ್ಸಾಯಿತು. ಶ್ರೀ ಪುಂಡಲೀಕ ಶೆಣೈಯವರ ಬಳಿ ಹೋಗಿ ಅವರಿಗೆ ವಿಷಯ ತಿಳಿಸಿದೆ. ಅವರು ಕೆಲಹೊತ್ತು ನನ್ನನ್ನೇ ದಿಟ್ಟಿಸಿ ನೋಡಿ, ''ಗಾಣಿಗರೇ ನಿಮಗೆ ಭಡ್ತಿಯಿಂದ ಸಂಬಳ ಜಾಸ್ತಿಯಾಗಬಹುದು ಮುಂದೆ ಹೆಚ್ಚಿನ ಭಡ್ತಿಗಳೂ ದೊರಕಬಹುದು. ಆದರೆ ಬದುಕಿನಲ್ಲಿ ಹಣ ಮತ್ತು ಅಧಿಕಾರ ಶಾಶ್ವತವಲ್ಲ. ಹಣ ಖರ್ಚಾಗಿ ಹೋಗುತ್ತದೆ. ನೀವು ಉನ್ನತ ಸ್ಥಾನ ಗಳಿಸಿದರೂ, ನಿವೃತ್ತರಾದ ಬಳಿಕ ಯಾರೂ ನಿಮ್ಮನ್ನು ಗುರುತಿಸುವುದಿಲ್ಲ... ಸಾಂಸ್ಕೃತಿಕ ರಂಗದಲ್ಲಿ ನೀವು ಈಗಾಗಲೇ ಗಳಿಸಿರುವ ಸ್ಥಾನಮಾನ ಸಣ್ಣದೆಂದು ತಿಳಿಯಬೇಡಿ. ನೀವು 'ರಂಗಭೂಮಿ' ಸಂಸ್ಥೆಯನ್ನು ಸ್ಥಾಪಿಸಿ ಅದನ್ನು ಉತ್ತಮ ರೀತಿಯಲ್ಲಿ ಮುನ್ನಡೆಸಿ ಶ್ರೇಷ್ಠ ಸಂಘಟಕನೆಂದು ತೋರಿಸಿಕೊಟ್ಟಿದ್ದೀರಿ. ರಂಗದ ಮೇಲೆ ಶ್ರೇಷ್ಠ ಕಲಾವಿದರಾಗಿ ಕಾಣಿಸಿಕೊಂಡು ಅಪಾರ ಜನರ ಪ್ರೀತಿ ವಿಶ್ವಾಸಗಳನ್ನು ಗಳಿಸಿದ್ದೀರಿ. ಇದು ಎಲ್ಲರಿಂದಲೂ ಸಾಧ್ಯವಾಗದ ಕಾರ್ಯ. ನಿಮಗೇನಾದರೂ ಆರ್ಥಿಕ ಸಂಕಷ್ಟ ಒದಗಿದರೆ ನಿಮ್ಮ ಸಹಾಯಕ್ಕೆ ನಾನಿದ್ದೇನೆ. 'ರಂಗಭೂಮಿ' ನೀವು ಕಟ್ಟಿದ ಸಂಸ್ಥೆ. ಅದನ್ನು ಬಿಟ್ಟು ನೀವು ಬೇರೆ ಊರಿಗೆ ತೆರಳಿದರೆ, ನಿಮ್ಮ ಹಿಂದೆಯೇ 'ರಂಗಭೂಮಿ'ಯೂ ಹೋಗುತ್ತದೆ ಎಂಬುದು ನೆನಪಿರಲಿ'' ಎಂದು ಭಾವಪರವಶರಾಗಿ ಹೇಳಿದರು. ನಾನು ತಕ್ಷಣ ''ಇಲ್ಲ ಸಾರ್ ! ನಾನು ಪ್ರಮೋಷನ್ ಸ್ವೀಕರಿಸುವುದಿಲ್ಲ, ಉಡುಪಿಯನ್ನು ಬಿಟ್ಟು ತೆರಳುವುದೂ ಇಲ್ಲ'' ಎಂದು ಅವರ ಕಾಲಿಗೆ ಬಿದ್ದೆ. ಆಗ ಅವರ ಕಣ್ಣಿನಿಂದ ಆನಂದ ಭಾಷ್ಪ ಹೊರಬಂದು, ''ಗುಡ್ ಡಿಸಿಷನ್ ! ನಿಮಗೆ ಏನೇ ಆಪತ್ತು ಬಂದರೆ ನನಗೆ ತಿಳಿಸಿ, ನಾನಿದ್ದೇನೆ'' ಅಂದರು. ಆದರೆ ಮುಂದೆ ನನಗೆ ಯಾವ ಸಂಕಷ್ಟವೂ ಒದಗಲಿಲ್ಲ. ಶ್ರೀ ಶೆಣೈಯವರಿಂದ ಆರ್ಥಿಕ ಸಹಾಯ ಕೇಳುವ ಪ್ರಸಂಗವೂ ನನಗೆ ಬರಲಿಲ್ಲ. ಆದರೆ ನನ್ನ ಜೀವನದ ದಿಕ್ಕು ಮಾತ್ರ ಬದಲಾಯಿತು. ಪ್ರಾಯಃ ಎಲ್.ಐ.ಸಿ.ಯಲ್ಲಿ ನಾನು ಓರ್ವ ಉನ್ನತ ಅಧಿಕಾರಿಯಾಗಿ ಗಳಿಸುವುದಕ್ಕಿಂತ ಹೆಚ್ಚಿನ ಸ್ಥಾನಮಾನಗಳನ್ನು ಪ್ರೀತಿ ವಿಶ್ವಾಸಗಳನ್ನು ಜನರಿಂದ ಗಳಿಸಿದ್ದೇನೆ. ಆದರ ಕೀರ್ತಿ ಶ್ರೀ ಪುಂಡಲೀಕ ಶೆಣೈಯವರಿಗೆ ಸಲ್ಲುತ್ತದೆ.

Sri Vidyabharathi Book Centre, Sringeri

CC-O. In Public Domain. Digitized by eGangotri

ಶ್ರೀ ಶೆಣೈಯವರಿಗೆ ನನ್ನ ಮೇಲಿದ್ದ ವಾತ್ಸಲ್ಯದ ಸಲುಗೆಯಿಂದ ನಾನೊಂದು ಬಾರಿ ಅವರನ್ನು ಪ್ರಶ್ನಿಸಿದ್ದೆ ''ಸಾರ್ ನೀವೇಕೆ ಮದುವೆಯಾಗಲಿಲ್ಲ. ನಿಮಗೆ ಸೆಕ್ಸ್ ಇಂಟರೆಸ್ಟ್ ಇರಲಿಲ್ಲವೇ?'' ಎಂದು. ಅವರು ನಗುತ್ತಲೇ ಉತ್ತರಿಸಿದರು – ''ಗಾಣಿಗರೇ, ನಿಮಗೆ ಸೆಕ್ಸಿನ ಸುಖ ಮಾತ್ರ ತಿಳಿದಿರಬಹುದು, ಆದರ ಇನ್ನೊಂದು ಮುಖ ನಿಮಗೆ ತಿಳಿದಿಲ್ಲ... ನಾನು ಮದುವೆಯಾಗದೇ ಇರುವುದಕ್ಕೆ ಕಾರಣವೂ ಇದೆ. ನಾನದನ್ನು ನಿಮಗೆ ತಿಳಿಸುವುದಿಲ್ಲ'' ಅಂದರು. ನಾನು ಅಳುಕುತ್ತಲೇ ಮುಂದುವರಿಸಿದೆ – ''ಆದರೆ ಸಾರ್! ಈ ಒಂಟಿ ಜೀವನ, ಕೈಕಾಲು ಗಟ್ಟಿ ಇರುವವರೆಗೆ ನಡೆಯುತ್ತದೆ. ತೀವ್ರ ವೃದ್ಧಾಪ್ಯದಲ್ಲಿ ಕಷ್ಟವಾಗಬಹುದೋ ಏನೋ...'' ಅಂದೆ. ಅವರೇನೂ ಉತ್ತರಿಸಲಿಲ್ಲ, ನನ್ನೆಡೆಗೆ ಗಂಭೀರವಾಗಿ ನೋಡಿ, ಶೂನ್ಯದೆಡೆಗೆ ದೃಷ್ಟಿ ಹರಿಸಿದರು! ಮುಂದೆ ಅವರು ಅಸೌಖ್ಯಕ್ಕೆ ಒಳಗಾಗಿ ಹಾಸಿಗೆ ಹಿಡಿದಿದ್ದಾಗ ಪ್ರತಿದಿನವೆಂಬಂತೆ ಅವರನ್ನು ನೋಡಿ ಬರಲು ಹೋಗುತ್ತಿದ್ದೆ. ನಾನು ಹೋಗುವಾಗ ಹೆಚ್ಚಿನ ಬಾರಿ ಅವರ ಬಳಿ ಯಾರೂ ಇರುತ್ತಿರಲಿಲ್ಲ. ಪಕ್ಕದ ಕೋಣೆಯಲ್ಲಿ ಸಾವಿರ ಸಾವಿರ ಸಂಖ್ಯೆಯ ಪುಸ್ತಕಗಳು ಚೆಲ್ಲಾಪಿಲ್ಲಿಯಾಗಿ ಬಿದ್ದಿದ್ದು ನೋಟಕರನ್ನು ಆಣಕಿಸುತ್ತಿದ್ದವು. ಒಂದು ಬಾರಿ ನಾನು ಹೋಗಿದ್ದಾಗ ಅವರು ನನ್ನನ್ನು ಹತ್ತಿರ ಕರೆದು, ನನ್ನ ಕೈ ಹಿಡಿದು, ''ಗಾಣಿಗರೇ, ನೀವೊಂದು ದಿವಸ ಕೇಳಿದ್ದಿರಿ – ಒಂಟಿ ಜೀವನ ಅಂತ್ಯ ಕಾಲದಲ್ಲಿ ಕಷ್ಟವಾಗಲಾರದೇ ಎಂದು'' ಮುಂದೇನೂ ಅವರು ಹೇಳಲಿಲ್ಲ. ಆದರೆ ಅವರ ಕಣ್ಣಂಚಿನಲ್ಲಿ ನೀರಿಳಿಯುತ್ತಿತ್ತು.

1976ರ ದಶಂಬರ 21ರಂದು ನನ್ನ ಸಹೋದ್ಯೋಗಿ ಶ್ರೀ ಕೊಚ್ಚಿಕಾರ್ ರಘುರಾಮ ಪೈಯವರಿಂದ ನನಗೆ ವಾರ್ತೆ ಬಂತು. ಶ್ರೀ ಪುಂಡಲೀಕ ಶೆಣೈಯವರ ದೇಹಾಂತವಾಗಿದೆಯೆಂದು. ತಕ್ಷಣ ನಾನಲ್ಲಿಗೆ ಓಡಿ ಹೋಗಿ ನೋಡುವಾಗ ಅವರ ಕುಟುಂಬದವರು ಅಂತ್ಯ ಸಂಸ್ಕಾರಕ್ಕೆ ಸಿದ್ಧತೆ ನಡೆಸುತ್ತಿದ್ದರು. ಅವರ ಪಾರ್ಥಿವ ಶರೀರವನ್ನು ಬೀಡಿನಗುಡ್ಡೆಯ ಸ್ಮಶಾನಕ್ಕೆ ಹೊತ್ತೊಯ್ಯುವಾಗ ಹೆಗಲು ಕೊಡುವ ಸೌಭಾಗ್ಯ ನನಗೂ ದೊರಕಿದ್ದರಿಂದ ಅವ್ಯಕ್ತ ಧನ್ಯತಾಭಾವ ನನಗೆ ಲಭಿಸಿತ್ತು. ಆದರೆ ಶವ ಸಂಸ್ಕಾರವನ್ನು ಒಂದು ದಿವಸ ಮುಂದೆ ದೂಡಿ ಪತ್ರಿಕಾ ಪ್ರಕಟಣೆ ನೀಡುತ್ತಿದ್ದರೆ ಸಾವಿರ ಸಾವಿರ ಸಂಖ್ಯೆಯ ಅವರ ಅಭಿಮಾನಿಗಳಿಗೆ ಮತ್ತು ಶಿಷ್ಯವರ್ಗದವರಿಗೆ ಅವರ ಅಂತ್ಯದರ್ಶನ ಮಾಡುವ ಅವಕಾಶ ಲಭ್ಯವಾಗುತ್ತಿತ್ತು ಎಂದು ನನಗನ್ನಿಸಿತು. ದಹನ ಕಾರ್ಯ ಸಂಪೂರ್ಣಗೊಂಡು ನಾನು ಮನೆಗೆ ಮರಳುವಾಗ, ಅಂದಿಗೆ 24 ವರ್ಷ ಗಳ ಹಿಂದೆ ನಡೆದ ನನ್ನ ತಂದೆಯ ಅಂತ್ಯ ಸಂಸ್ಕಾರದ ನೆನಪು ನನಗಾಗುತ್ತಿತ್ತು.

Sri Vidyabharathi Book Centre, Sringeri

CC-O. In Public Domain. Digitized by eGangotri

ಶ್ರೀ ಪುಂಡಲೀಕ ಶೆಣೈಯವರ ನಿಧನದಿಂದ ನಮ್ಮ ಪಾಲಿಗೆ ''ರಂಗಭೂಮಿ''ಯ ಆಧಾರ ಸ್ತಂಭವೊಂದು ಕಳಚಿ ಬಿದ್ದಂತಾಯಿತು. ಅವರ ಹೆಸರನ್ನು ''ರಂಗಭೂಮಿ'' ಸಂಸ್ಥೆಯು ಪ್ರತಿವರ್ಷ ಸ್ಮರಿಸುವಂತಾಗಬೇಕೆಂಬ ತುಡಿತ ನನಗಿತ್ತು. ನನ್ನ ಬಯಕೆಯನ್ನು ಯಾವ ರೀತಿಯಲ್ಲಿ ಕಾರ್ಯರೂಪಕ್ಕೆ ತರಲಿ ಎಂದು ಯೋಚಿಸುತ್ತಿರುವಾಗ ಶ್ರೀ ಪಾಂಡುರಂಗ ವಿ. ಶೆಣೈಯವರು ಒಂದು ದಿನ ನನ್ನನ್ನು ಕರೆಸಿ ಶ್ರೀ ಪುಂಡಲೀಕ ಶೆಣೈಯವರು ತನ್ನ ಇಷ್ಟಪತ್ರ(ವಿಲ್)ದಲ್ಲಿ ತಿಳಿಸಿದಂತೆ ಅವರ ಉಳಿತಾಯದ ನಿಧಿಯಲ್ಲಿ ರೂ. 2,000/-ವನ್ನು 'ರಂಗಭೂಮಿ'ಗೆ ದೇಣಿಗೆಯಾಗಿ ನೀಡಿದರು. ಆದೇ ರೀತಿ, ಶ್ರೀ ಶೆಣೈಯವರ ಶಿಷ್ಯರಾಗಿದ್ದ ಮಂಗಳೂರಿನ ಶ್ರೀ ಆರೂರು ರಾಮಮೋಹನ ರಾವ್ ಅವರು ರೂ. 3,000/-ಮತ್ತು ಉಡುಪಿಯ ಶ್ರೀಮತಿ ವಿನುತಾ ನಾರಾಯಣ ರಾವ್ ಅವರು ರೂ. 3,000/- ನೀಡಿದರು. ಈ ರೀತಿ ಸಂಗ್ರಹವಾದ ಒಟ್ಟು ರೂ. 8,000/-ದ ಬಡ್ಡಿಯಿಂದ ನಾವು 1979ರಲ್ಲಿ ಆರಂಭಿಸಿದ ರಾಜ್ಯಮಟ್ಟದ ಕನ್ನಡ ನಾಟಕ ಸ್ಪರ್ಧೆಯಲ್ಲಿ ದ್ವಿತೀಯ ನಗದು ಬಹುಮಾನವನ್ನು ದಿ। ಯು. ಪುಂಡಲೀಕ ಶೆಣೈ ಸ್ಮಾರಕವಾಗಿ ನೀಡುತ್ತಿದ್ದೇವೆ. ಆರಂಭದಲ್ಲಿ ರೂ. 500/- ಆಗಿದ್ದ ಸದ್ರಿ ನಗದು ಬಹುಮಾನವನ್ನು ಈಗ ರೂ. 5,000/-ಕ್ಕೆ ಏರಿಸಿದ್ದೇವೆ.

'ರಂಗಭೂಮಿ' ಸಂಸ್ಥೆಯ ಪಾಲಿಗೆ ದಿ। ಯು. ಪುಂಡಲೀಕ ಶೆಣೈಯವರು ಚಿರಸ್ಮರಣೀಯರು!

We must be optimistic in our thought

We must be optimistic in our thought, in our speech. The pessimist says the rain will make mud; the optimist says it will lay the dust. The pessimist says I was worse yesterday; the optimist says I am better today. The pessimist says there goes the stinging bee, the optimist says there is a honey-bee. The pessimist says I am sorry I must die; the optimist says I am glad I am alive.



ನಿಂತವರು : – ಸರ್ವಶ್ರೀ 1. ಎಮ್. ಲಕ್ಷ್ಮೀನಾರಾಯಣ ಪೈ 2. ಟಿ. ಕೇಶವ ಪೈ 3. ರಘುರಾಮ ಆಚಾರ್ಯ 4. ಪಿ. ರಮೇಶ ಪ್ರಭು

ಕುಳಿತವರು : – ಸರ್ವಶ್ರೀ 1. ಬಿ. ರಾಮಕೃಷ್ಣಾಚಾರ್ಯ 2. ಉ. ಪುಂಡಲೀಕ ಶೆಣೈ 3. ಉ. ಲಕ್ಷ್ಮೀನಾರಾಯಣ ಕಿಣಿ
4. ಡಾ। ಟಿ. ಎಮ್. ಎ. ಪೈ 5. ಕೆ. ರಾಘವೇಂದ್ರ ರಾವ್ 6. ಕೆ. ನಾರಾಯಣಹರಿ ಭಟ್
7. ಎಮ್. ನಾರಾಯಣ ಪ್ರಭು

Sri Vidyabharathi Book Centre, Sringeri

CC-O. In Public Domain. Digitized by eGangotri

CC-O. In Public Domain. Digitized by eGangotri

ಶ್ರೀ ಕಾಶೀಮಠಾಧೀಶರಾದ ಶ್ರೀಮದ್ ಸುಧೀಂದ್ರತೀರ್ಥ ಸ್ವಾಮೀಜಿಯವರು ತಂಜಪುರಿಯ "ಶಾಸುಪತೀಶ ಸದನ" ದಲ್ಲಿ ನಡೆದ ಸರಳ ಸಮೂಹರಂಭದಲ್ಲಿ ಶ್ರೀ ಲ ಯು. ಸಾಂಬಶಿವಂಗ ಶಾಸುಪತೀಶ ಶಿಕ್ಷೆ (ಟ್ರಸ್ಟಿನ ಸಂಸ್ಥಾಪಕರು) ಯವರನ್ನು ಶಾಲುಹೊದಿಸಿ ಅಭಿನಂದಿಸುತ್ತಿರುವುದು.

Sri Vidyabharathi Book Centre, Sirsi

ಉಡುಪಿಯ ಶ್ರೀ ಲಕ್ಷ್ಮೀ ವೆಂಕಟೇಶ ದೇವಸ್ಥಾನದಲ್ಲಿ ನಡೆದ ಸಮಾರಂಭದಲ್ಲಿ ಮುಖ್ಯ ಅತಿಥಿಯಾಗಿ ಆಗಮಿಸುತ್ತಿರುವ ಶ್ರೀ ಕ್ಷೇತ್ರ ಧರ್ಮಸ್ಥಳ ಮಂಜುನಾಥ ಸ್ವಾಮಿ ದೇವಸ್ಥಾನದ ಧರ್ಮಾಧಿಕಾರಿಯಾಗಿರುವ ಡಾ। ಡಿ. ವೀರೇಂದ್ರ ಹೆಗ್ಡೆಯವರನ್ನು ಶ್ರೀ ಯು. ಪಾಂಡುರಂಗ ವಾಸುದೇವ ಶೆಣೈಯವರು ಹಾರಾರ್ಪಣೆ ಮಾಡಿ ಸ್ವಾಗತಿಸುತ್ತಿರುವುದು.

Sri Vidyabharathi Book Centre, Sringeri

CC-O. In Public Domain. Digitized by eGangotri

CC-O. In Public Domain. Digitized by eGangotri

ಶ್ರೀ ಯು. ಪುಂಡಲೀಕ ಶೆಣೈ

— ವಿದ್ಯಾವಾಚಸ್ಪತಿ ಶ್ರೀ ಬನ್ನಂಜೆ ಗೋವಿಂದ ಆಚಾರ್ಯ, ಉಡುಪಿ

ಆಗ ನನಗಿನ್ನೂ ಹದಿವರೆಯ.

ನನ್ನ ಸಹಪಾಠಿಗಳಲ್ಲಿ ಬಹಳ ಮಂದಿ ಪುಂಡಲೀಕ ಶೆಣೈ ಅವರ ಬಳಿ ಇಂಗ್ಲಿಷ್ ಪಾಠ ಹೇಳಿಸಿಕೊಳ್ಳುತಿದ್ದರು.

ಪುಂಡಲೀಕ ಶೆಣೈಯವರು ವಿದ್ಯಾರ್ಥಿ ವೃಂದದಲ್ಲಿ ದಂತಕಥೆಯಾಗಿದ್ದರು. ಅವರು ಹೀಗೆ ಆಡಿಕೊಳ್ಳುತಿದ್ದರು:

ಇಂಗ್ಲಿಷ್ ಪಾಠ ಕೇಳಿದರೆ ಕೇಳಬೇಕು ಪುಂಡಲೀಕ ಶೆಣೈ ಅವರ ಕೈಯಲ್ಲಿ. ಅವರ ಪಾಠ ಅಷ್ಟು ಚಂದವಂತೆ ! ಅಷ್ಟು ಕರಾರುವಾಕ್ಕಂತೆ.

ಇಂಗ್ಲಿಷ್ ವ್ಯಾಕರಣದಲ್ಲಿ ಅವರು ಸಿದ್ಧಹಸ್ತರಂತೆ !

ನೆಹರೂ ಅವರ ಬರವಣಿಗೆಯಲ್ಲೂ ಅವರು ತಪ್ಪು ಹುಡುಕಿ ಗುರುತು ಹಾಕಿಟ್ಟಿದ್ದಾರಂತೆ.

ಇದು ಹುಡುಗರ ಹರಟೆಯಲ್ಲಿ ಪುಂಡಲೀಕ ಶೆಣೈ ಅವರ ಬಗ್ಗೆ ವ್ಯಕ್ತವಾಗುತ್ತಿದ್ದ ಅನ್ನಿಸಿಕೆಗಳು !

ನನಗೂ ಆಸೆಯಾಯಿತು. ನಾನೂ ಪುಂಡಲೀಕ ಶೆಣೈ ಅವರ ಶಿಷ್ಯನಾಗಿ ಇಂಗ್ಲಿಷ್ ಕಲಿಯಬೇಕು.

ಒಂದು ದಿನ ಆ ಅಖಂಡ ಬ್ರಹ್ಮಚಾರಿಯ ಮನೆಗೆ ಹೋದೆ.

ನನ್ನ ಆಸೆಯನ್ನು ತೋಡಿಕೊಂಡೆ.

ತುಂಬ ಮಂದಿ ಅವರ ಬಳಿ ಪಾಠಕ್ಕೆ ಬರುತಿದ್ದರು.

ಆದರೆ ಅವರಿಗೆ 'ಪುರುಸೊತ್ತಿಲ್ಲ' ಎಂದು ಹೇಳಿ ವಿದ್ಯಾರ್ಥಿಗಳನ್ನು ಹಿಂದೆ ಕಳಿಸಿಯೇ ಗೊತ್ತಿಲ್ಲ.

ಕುಶಿಯಲ್ಲಿ ಕುಪ್ಪಳಿಸಿದರು. ನಾಳೆಯೇ ಬಾ. ಪಾಠ ಶುರು ಮಾಡೋಣ ಎಂದರು.

ಅವರಿಗೆ ಸ್ವಂತ ಮಕ್ಕಳಿಲ್ಲ. ಅವರು ಬ್ರಹ್ಮಚಾರಿಯಲ್ಲವೆ ? ಆದರೆ ಅವರ ಜ್ಞಾನಪುತ್ರರು ಅಸಂಖ್ಯ. ಎಲ್ಲರೂ ಮಕ್ಕಳೇ, ಈ ಮಕ್ಕಳ ಮೇಲೆ ಅವರ ಮಮತೆಯ ಮಳೆ.

ಆದು ಎಂಥ ವಿದ್ಯಾ ಪ್ರೇಮ ! ಎಂಥ ವಿದ್ಯಾರ್ಥಿ ಪ್ರೇಮ !

CC-O. In Public Domain. Digitized by eGangotri

ವಿದ್ಯಾರ್ಥಿಗಳಿಂದ ಒಂದು ಕಾಸನ್ನೂ ಪ್ರತಿಫಲವಾಗಿ ಪಡೆಯದೆ ತನ್ನಲ್ಲಿದ್ದ ವಿದ್ಯೆಯನ್ನೆಲ್ಲ ಧಾರೆಯೆರೆಯುವ ಧಾರಾಳಿ.

ಇಂಥ ನಿರ್ವ್ಯಾಜ, ನಿಸ್ಪೃಹ ಅಧ್ಯಾಪಕರನ್ನು ಇಂದು ಎಲ್ಲಿ ಕಾಣಬೇಕು!

ನಾನು ಅವರ ಬಳಿ ಓದಿದ್ದು ಕೆಲವು ತಿಂಗಳು ಮಾತ್ರ.

ಆದರೆ ಎಂಥ ಗಟ್ಟಿಯಾದ ಇಂಗ್ಲಿಷಿನ ಪಂಚಾಂಗ ಹಾಕಿಬಿಟ್ಟರು.

ಎಷ್ಟು ಪ್ರೀತಿಯಿಂದ ಕಲಿಸಿದರು.

ವಿದ್ಯಾರ್ಥಿಗಾಗಿ ಕೂತು ಕಾಯುವ ಆ ಸಂಭ್ರಮವೇನು!

ಇಷ್ಟಿದ್ದೂ ತಾನು ಹಿರಿಯ ವಿದ್ವಾಂಸ ಎನ್ನುವ ಬಿಗುಮಾನ ಇಲ್ಲ.

ಮಕ್ಕಳ ಜತೆಗೆ ಮಗುವಾಗಿ ಬೆರೆತುಬಿಡುವ ಮುಗ್ಧತೆ.

'ವಿದ್ಯಾ-ವಿನಯ ಸಂಪನ್ನೇ' ಎಂಬ ಗೀತೆಯ ಮಾತಿಗೆ ಅವರು ನಿದರ್ಶನವಾಗಿದ್ದರು.

ಅಂಥ ಹಿರಿಯ ಚೇತನಕ್ಕೆ ತನ್ನ ತಾನೆ ತಲೆ ಬಾಗಿ 'ನಮೋ' ಎನ್ನುತ್ತದೆ.

ಈಗ ಪುಂಡಲೀಕ ಶೆಣೈ ನಮ್ಮ ಮುಂದಿಲ್ಲ.

ಆದರೆ ಅವರ ಬಳಿ ಎರಡಕ್ಷರ ಓದಿದ ನಮ್ಮೆಲ್ಲರ ಒಳಗೂ ಅವರು ಅಚ್ಚಳಿಯದೆ ಉಳಿದಿದ್ದಾರೆ.

Anecdote

I never wanted anyone to be more courteous than I am !

One afternoon President Lincoln of America was driving in his coach. On the way he met an old negro who bowed and tipped his hat. Lincoln did the same to the negro. A friend noticed what the President had done and asked him: "Why did you tip your hat to that old darky ?" "Because I have never wanted anyone to be more courteous than I am," explained Lincoln.

ದಿ। ಯು. ಪುಂಡಲೀಕ ಶೆಣೈ ಮೆಮೋರಿಯಲ್ ಟ್ರಸ್ಟ್ ಹಾಗೂ ಸಂಗೀತ ಸಭಾ, ಉಡುಪಿ ಇವರ ಜಂಟಿ ಆಶ್ರಯದಲ್ಲಿ ಮಣಿಪಾಲದ ಮಾಹೆಯ ಉಪಕುಲಪತಿಯಾದ ಪ್ರೊ। ಬಿ. ಎಂ. ಹೆಗ್ಡೆಯವರ ಅಧ್ಯಕ್ಷತೆಯಲ್ಲಿ ಉಡುಪಿಯ ಶ್ರೀ ಲಕ್ಷ್ಮೀವೆಂಕಟೇಶ ದೇವಸ್ಥಾನದ, ಶ್ರೀ ವರದೇಂದ್ರ ಕಲಾಮಂದಿರದಲ್ಲಿ ದಿ। ಯು. ಪುಂಡಲೀಕ ಶೆಣೈಯವರ 105ನೆಯ ಜನ್ಮದಿನೋತ್ಸವವನ್ನು 17-4-2001ರಂದು ಆಚರಿಸುತ್ತಿರುವುದು. (ಚಿತ್ರದಲ್ಲಿ ಎಡದಿಂದ ಶ್ರೀ ಟಿ. ರಂಗ ಪೈ, ಪ್ರೊ। ಬಿ. ಎಂ. ಹೆಗ್ಡೆ, ಶ್ರೀ ಟಿ. ನಾರಾಯಣ ಎಂ. ಪೈ, ಶ್ರೀ ಯು. ಹರೀಶ ಪಿ. ಶೆಣೈ ಹಾಗೂ ಅಂಬಲಪಾಡಿಯ ಶ್ರೀ ನಿ. ಮುರಾರಿ ಬಲ್ಲಾಳರನ್ನು ಕಾಣಬಹುದು.)

Sri Vidyabharathi Book Centre, Sringeri

CC-O. In Public Domain. Digitized by eGangotri

ದಿ। ಯು. ಪುಂಡಲೀಕ ಶೆಣೈಯವರ 105ನೆಯ ಜನ್ಮದಿನೋತ್ಸವದ ಅಂಗವಾಗಿ ತಾ. 17-4-2001ರಂದು ಉಡುಪಿಯ ಶ್ರೀ ಲಕ್ಷ್ಮೀವೆಂಕಟೇಶ ದೇವಸ್ಥಾನದಲ್ಲಿ ಏರ್ಪಡಿಸಲಾದ ಸಂಗೀತ ಕಾರ್ಯಕ್ರಮದಲ್ಲಿ ಮುಂಬಯಿಯ ಪ್ರಸಿದ್ಧ ಶಾಸ್ತ್ರೀಯ ಸಂಗೀತಗಾರ ಪದ್ಮಶ್ರೀ ಶ್ರೀಮತಿ ಕಿಶೋರಿ ಅಮ್ಮಣ್ಕರ್‌ರವರ ಶಿಷ್ಯರಾದ ಶ್ರೀ ರಘುನಂದನ್ ಪಣಶಿಕರ್ ಹಾಡುತ್ತಿರುವುದು. ಶ್ರೀ ಸುಧೀರ್ ನಾಯಕ್, ಮುಂಬಯಿ, ಹಾರ್ಮೋನಿಯಂ ಹಾಗೂ ಶ್ರೀ ಟಿ. ರಂಗ ಪೈ ಮತ್ತು ಶ್ರೀ ದಿನೇಶ ಶೆಣೈ ತಬಲಾ ಬಾರಿಸುತ್ತಿರುವುದು.

CC-O. In Public Domain. Digitized by eGangotri

CC-O. In Public Domain. Digitized by eGangotri

ಸಂಗೀತ ಸಭಾದ ಒಡನಾಟದಲ್ಲಿ ಪುಂಡಲೀಕ ಶೆಣೈ

– ಶ್ರೀ ಟಿ. ರಂಗ ಪೈ
ಕಾರ್ಯಾಧ್ಯಕ್ಷರು, ಸಂಗೀತ ಸಭಾ, ಉಡುಪಿ

ತಮ್ಮ ವೃತ್ತಿ ಬದುಕಿಗೆ ಪಾಠಶಿಕ್ಷಣ, ಗಣಿತ, ಭಾಷಾಶಾಸ್ತ್ರ ಎಷ್ಟು ಸಂಗತವೋ ತಮ್ಮ ವೈಯಕ್ತಿಕ ಬದುಕಿಗೆ ಅಷ್ಟೇ ಸಂಗತವಾದುದು ನಾಟಕ, ಸಂಗೀತ, ಸಾಹಿತ್ಯ, ದೃಶ್ಯಕಲೆ ಎಂದು ತಿಳಿದಿದ್ದ ಮಹನೀಯರು ದಿ। ಶ್ರೀ ಪುಂಡಲೀಕ ಶೆಣೈಯವರು. ಇವು ಆಜನ್ಮ ಬ್ರಹ್ಮಚಾರಿಗಳಾಗಿದ್ದ ಶ್ರೀ ಶೆಣೈಯವರ ಬಾಳಸಂಗಾತಿಗಳಾಗಿದ್ದದ್ದು ಸತ್ಯ. ಬದುಕಿಗೆ ಅರ್ಥವನ್ನು ಕೊಡಬಲ್ಲ ಇಂತಹ ಸಂಗಾತಿಗಳ ಅನುಕಾಲದ ಒಡನಾಟದಿಂದ ಶ್ರೀ ಶೆಣೈಯವರು ಎಲ್ಲರಂತೆ ಸಂಸಾರಿಗರಾಗಿ ಜೀವನವನ್ನು ನಡೆಸಲು ಇಷ್ಟಪಟ್ಟಿರಲಿಲ್ಲವೋ ಏನೋ.

ನಾಟಕದ ಮೇಲಿನ ಗೀಳು ಎನ್ನುವುದಕ್ಕಿಂತಲೂ ಹೆಚ್ಚಾಗಿ ಅದರ ಸಂಯೋಜನೆ, ಸಂಘಟನೆಯಲ್ಲಿನ ಅತೀವ ಆಸಕ್ತಿ ಉಡುಪಿಯ ಕ್ರಿಶ್ಚಿಯನ್ ಹ್ಯಾಸ್ಕೂಲಿನ ತಮ್ಮ ಅಧ್ಯಾಪನ ವೃತ್ತಿಯ ದಿನಗಳಲ್ಲೇ ಗೋಚರವಾಗಿ ಮತ್ತೆ 'ರಂಗಭೂಮಿ' ಸಂಸ್ಥೆಯ ಚಟುವಟಿಕೆಗಳ ಸಕ್ರಿಯ ಪಾಲ್ಗೊಳ್ಳುವಿಕೆಯಲ್ಲಿ ಸ್ಪಷ್ಟವಾಗಿ ಕಾಣತೊಡಗಿತು.

ಶ್ರೀ ರಾಮಕೃಷ್ಣ ಥಿಯೇಟರ್‌ನ ನಿರ್ದೇಶಕ ಮಂಡಲಿಯಲ್ಲಿದ್ದ ಶ್ರೀ ಪುಂಡಲೀಕ ಶೆಣೈಯವರು ಹೊಸ ಬಿಡುಗಡೆಯ ಹೆಚ್ಚುಕಡಿಮೆ ಎಲ್ಲಾ ಸಿನೆಮಾಗಳ ರಾತ್ರಿ ದೇಖಾವೆಗೆ ಐಡಿಯಲ್ ಶ್ರೀ ವಾಸುದೇವ ನಾಯಕರನ್ನೂ ತಮ್ಮ ಅಣ್ಣನ ಮಗ ಬುಲಿಯನ್ ಪಾಂಡುರಂಗ ಶೆಣೈಯವರನ್ನೂ ಕೂಡಿಕೊಂಡು ಹೋಗುತ್ತಿದ್ದರೂ ಚಿತ್ರ ಪ್ರಾರಂಭವಾದ ಅರೆಗಳಿಗೆಯಲ್ಲೇ ಅದರ ಗುಣಮಟ್ಟಕ್ಕೆ ಅನುಗುಣವಾಗಿ ಸ್ಪಂದಿಸುತ್ತಿದ್ದರು. ಅಂದರೆ, ಒಳ್ಳೆಯ ಚಿತ್ರವಾಗಿದ್ದರೆ ಎವೆಯಿಕ್ಕದೆ ನೋಡುತ್ತಿದ್ದರು; ತಮ್ಮ ನಿರೀಕ್ಷೆಯ ಮಟ್ಟದ್ದಲ್ಲವಾದರೆ ಅಲ್ಲೇ ಆಸನದಲ್ಲಿ ಗೊರಕೆ ಹೊಡೆಯದೆ ನಿದ್ರಿಸುತ್ತಿದ್ದರು. ಹಿಂದಿನ ಶತಮಾನದ '70ರ ದಶಕದ ಹೆಚ್ಚಿನ ಎಲ್ಲಾ ಸಿನೆಮಾ ದೇಖಾವೆಗಳ ವೇಳೆ ಅವರು ನಿದ್ದೆ ಹೋಗುತ್ತಿದ್ದುದೇ ಹೆಚ್ಚೆಂದು ತಿಳಿದಾಗ ಆ

CC-O. In Public Domain. Digitized by eGangotri

ಅವಧಿಯ ಚಿತ್ರಗಳ ಗುಣಮಟ್ಟವನ್ನು – ಕನಿಷ್ಠ ಶ್ರೀ ಶೆಣೈಯವರ ದೃಷ್ಟಿಯಿಂದ – ನಿರ್ಧರಿಸುವುದು ಸುಲಭ ಸಾಧ್ಯ.

ಚಿತ್ರಕಲೆಯಲ್ಲಿ ಶ್ರೀ ಪುಂಡಲೀಕ ಶೆಣೈಯವರಿಗೆ ಅಪಾರ ಆಸ್ಥೆ, ಆಸಕ್ತಿ ಇದ್ದವು. ತಮ್ಮ ಶಾಲಾ ಅಧ್ಯಾಪನ ದಿನಗಳ ವಿದ್ಯಾರ್ಥಿ-ಶಿಷ್ಯ ದಿ। ಶ್ರೀ ಕೆ. ಕೆ. ಹೆಬ್ಬಾರರ ಪ್ರತಿಭೆಯಿಂದ ಅವರು ಚಿತ್ರಕಲೆಯಲ್ಲಿ ವಿಶೇಷ ಆಸಕ್ತಿಯನ್ನು ಹೊಂದಿರಬಹುದೇ ಎಂದು ನಾನು ಅನುಮಾನಿಸುತ್ತೇನೆ. ಶ್ರೀ ಹೆಬ್ಬಾರರಿಗೆ ತಮ್ಮ ವಿದ್ಯಾಗುರು ಶ್ರೀ ಶೆಣೈಯವರ ಮೇಲೆ ಭಯಭಕ್ತಿ ಇದ್ದವು. ಶ್ರೀ ಶೆಣೈಯವರು ಶ್ರೀ ಹೆಬ್ಬಾರರ ರೇಖಾಚಿತ್ರಗಳನ್ನೂ ವರ್ಣಚಿತ್ರಗಳನ್ನೂ ವಿಮರ್ಶನದೃಷ್ಟಿಯಿಂದ ಪ್ರಶಂಸಿಸುತ್ತಿದ್ದರು. ಚಿತ್ರಕಲೆಯ ಗುಣಮಟ್ಟವನ್ನು ವಿಶ್ಲೇಷಿಸುವ ದೃಷ್ಟಿಕೋನ ಅವರಿಗೆ ಸಹಜವಾಗಿಯೇ ಪ್ರಾಪ್ತಿಯಾಯಿತೆಂದು ನಾನು ತಿಳಿಯುತ್ತೇನೆ. 1964ರ ಅಕ್ಟೋಬರ್‌ನಲ್ಲಿ ಉಡುಪಿಯಲ್ಲಿ ಸಂಗೀತ ಸಭಾ ಸಂಘಟಿಸಿದ ರಾಷ್ಟ್ರಮಟ್ಟದ ಕೆನರಾ ಜಿಲ್ಲೆಗಳ ಕಲಾವಿದರ ಪ್ರದರ್ಶನಕ್ಕೆ ಬಂದಿದ್ದ ಸಾವಿರಕ್ಕೂ ಮಿಕ್ಕಿದ ಚಿತ್ರಗಳಲ್ಲಿ 360ನ್ನು ಆಯ್ಕೆಮಾಡುವ ಮೂರುಮಂದಿಯ ಸಮಿತಿಯಲ್ಲಿ ಶ್ರೀ ಶೆಣೈಯವರು ಮುಖ್ಯಸ್ಥರಾಗಿದ್ದರು.

ನಾಟಕ ಕಲೆಯಷ್ಟೇ ಕಡು ಆಸಕ್ತಿ ಶ್ರೀ ಪುಂಡಲೀಕ ಶೆಣೈಯವರಿಗೆ ಸಂಗೀತ ಕಲೆಯಲ್ಲಿ ಇದ್ದಿಲ್ಲವಾಗಿದ್ದರೂ ಶಾಸ್ತ್ರೀಯ ಕಚೇರಿಗಳಲ್ಲಿ ಪಾಲ್ಗೊಂಡು ನಾದಮಾಧುರ್ಯವನ್ನು ಸವಿಯುತ್ತಿದ್ದರು. ನಿಜಕ್ಕೂ ಅವರ ಆಸಕ್ತಿ ಇಂತಹ ಕಲೆಗಳ ಸಂಘಟನೆಯಲ್ಲಿದ್ದದ್ದು ಸ್ಪಷ್ಟ. ತಾವಾಗಿ ಯಾವುದೇ ಕಲಾಸಂಸ್ಥೆಯನ್ನು ತೊಡಗಿದ್ದಿಲ್ಲವಾದರೂ ತಮ್ಮೂರಿನಲ್ಲಿ ಹುಟ್ಟಿದ ಯಾವುದೇ ಕಲಾ ಸಂಘಟನೆಗೆ ತಮ್ಮ ಶ್ರಮ, ಸಮಯವನ್ನು ವಿನಿಯೋಗಿಸಿ ಅದನ್ನು ಬೆಳೆಸಲು ತವಕ ಹೊಂದಿದ್ದರು. ಅದು ಶ್ರೀ ಶೆಣೈಯವರ ದೊಡ್ಡ ಗುಣ.

ಶ್ರೀ ವಿಜಯನಾಥ ಶೆಣೈಯವರು 1961ರ ಉತ್ತರಾರ್ಧದಲ್ಲಿ ಉಡುಪಿಯಲ್ಲಿ ಸಂಗೀತಸಭಾ ಸಂಸ್ಥೆಯನ್ನು ಹುಟ್ಟುಹಾಕಿದಾಗ ಆಡಳಿತ ಮಂಡಳಿಯಲ್ಲಿ ಅವರು ತಮ್ಮ ಚಿಕ್ಕಪ್ಪ ಶ್ರೀ ಪುಂಡಲೀಕ ಶೆಣೈಯವರನ್ನು, ಅವರ ಕಲಾನಿಷ್ಠೆಯನ್ನು ಪರಿಗಣಿಸಿಯೂ, ಸೇರಿಸಿರಲಿಲ್ಲ. ಮುಂದಿನ ವರ್ಷಗಳಲ್ಲಿ ಸದಸ್ಯರ ಬಹುಮತದಿಂದ ಶ್ರೀ ಪುಂಡಲೀಕ ಶೆಣೈಯವರು ಆಡಳಿತ ಮಂಡಳಿಗೆ ಸೇರ್ಪಡೆಗೊಂಡಾಗ ವಿಜಯನಾಥ ಶೆಣೈಯವರಿಗೆ ಆತಂಕ. ತಮ್ಮ ತಂದೆಯನ್ನು ಎರಡು-ಮೂರು ವರ್ಷಗಳ ಹಿಂದೆಯಷ್ಟೇ ಕಳಕೊಂಡಿದ್ದ ವಿಜಯನಾಥರಿಗೆ ಪುಂಡಲೀಕ ಶೆಣೈಯವರೇ ತಂದೆಯ ಸಮಾನರಾದ ಹಿರಿಯರಾಗಿದ್ದರು, ಅಣ್ಣ ಪಾಂಡುರಂಗ

CC-O. In Public Domain. Digitized by eGangotri
ಮನೆಯ ಯಜಮಾನಿಕೆಯಾಗಿದ್ದರು. ಸಂಗೀತ ಸಭಾದ ಅಧ್ಯಕ್ಷರಾಗಿ ಕೆ. ಕೆ. ಪೈ ಯವರ ಹಿರಿತನದಲ್ಲಿ ಪ್ರಭಾಕರ ಬಿಲ್ಡಿಂಗ್‌ನಲ್ಲಿ ನಡೆಯುತ್ತಿದ್ದ ಆಡಳಿತ ಮಂಡಳಿಯ ಸಭೆಗಳಲ್ಲಿ, ಕಾರ್ಯಕ್ರಮಗಳ ಸಂಯೋಜನೆಗಿಂತಲೂ ಹೆಚ್ಚಾಗಿ ಆಡಳಿತ ನಿರ್ವಹಣೆಯ ದೋಷ – ನ್ಯೂನತೆಗಳನ್ನೇ ಎತ್ತಿ ಚರ್ಚೆಗೆ ಒಳಪಡಿಸುತ್ತಿದ್ದ ಶ್ರೀ ಪುಂಡಲೀಕ ಶೆಣೈಯವರ ಮಾತುಗಳು ಆಷ್ಟೇ ಕಟ್ಟುನಿಟ್ಟಿನ ಶಿಸ್ತಿನ ಸಿಪಾಯಿಗಳಾಗಿದ್ದ ಶ್ರೀ ಕೆ. ಕೆ. ಪೈಯವರಿಗೆ ಸಮಂಜಸವೆನಿಸುತ್ತಿದ್ದರೂ, ತಮ್ಮ ಎಡಂಬಿಡಂಗಿತನದ ನಡುವೆಯೂ ಕಾರ್ಯಕ್ರಮಗಳನ್ನು ಕ್ರಮಬದ್ಧವಾಗಿ ಸಂಘಟಿಸುತ್ತಿದ್ದ ವಿಜಯನಾಥರಿಗೆ ಮುಜುಗರವಾಗದಂತೆ ಜಾಣ್ಮೆಯಿಂದ ಸಭಾಕಲಾಪಗಳನ್ನು ನಡೆಸಿಕೊಡುತ್ತಿದ್ದರು. ಪ್ರಾಯಶಃ ಕಾರ್ಯದರ್ಶಿ ವಿಜಯನಾಥರಿಗೆ ಅಧ್ಯಕ್ಷ ಕೆ. ಕೆ. ಪೈ ಯವರು ಕಿವಿಮಾತನ್ನು ಹೇಳುತ್ತಿದ್ದಿರಬಹುದು. ಸಮಿತಿಯ ಸಭೆಗಳಲ್ಲಿ ಚಿಕ್ಕಪ್ಪನ ನಿಷ್ಠುರದ ಮಾತು, ಮತ್ತೆ ಹೊರಗಡೆ ಅಧ್ಯಕ್ಷರ ಕಿವಿಮಾತು – ಇಬ್ಬರು ಶಿಸ್ತಿನ ಕಟ್ಟಾಳುಗಳ ನಡುವೆ ಸ್ವತಂತ್ರ ಮನೋಧರ್ಮದ ವಿಜಯನಾಥರು ಆಡಕತ್ತರಿಯಲ್ಲಿ ಸಿಕ್ಕಿ ಪ್ರಾಯಶಃ ಆಡಳಿತಮಂಡಳಿಯ ಸಭೆಗಳನ್ನೇ ಮುಂದಿನ ವರ್ಷಗಳಲ್ಲಿ ನಡೆಸದೆ ಒಂದರ ಹಿಂದೆ ಇನ್ನೊಂದರಂತೆ ಕಾರ್ಯಕ್ರಮಗಳನ್ನು ಸಾದರಪಡಿಸುತ್ತಾ ಬಂದರು.

ಇಷ್ಟಿದ್ದರೂ ದೊಡ್ಡಗಾತ್ರದ ಕಾರ್ಯಕ್ರಮಗಳನ್ನು ವಿಜಯನಾಥ ಶೆಣೈಯವರು ಸಂಗೀತ ಸಭಾದ ಕಾರ್ಯದರ್ಶಿಯ ನೆಲೆಯಲ್ಲಿ ಸಂಘಟಿಸುವ ಮೊದಲು ಆಡಳಿತ ಮಂಡಳಿಯ ಪದಾಧಿಕಾರಿಗಳು – ಸದಸ್ಯರೊಂದಿಗೆ ಊರಿನ ಕಲಾಪ್ರೇಮಿಗಳನ್ನೂ ಸೇರಿಸಿ ಪ್ರಭಾಕರ ಬಿಲ್ಡಿಂಗ್‌ನಲ್ಲಿ ಸಭೆಗಳನ್ನು ನಡೆಸಿದ್ದುಂಟು. 1966ರಲ್ಲಿ ಶ್ರೀಮತಿ ಪಂಡರೀಬ್ಯಾಯವರ ಶ್ರೀ ಕೃಷ್ಣ ಚೈತನ್ಯ ನಾಟಕ ಸಭಾದ ಐದು ದಿನಗಳ ಅವಧಿಯ ನಾಟಕಗಳನ್ನು ಸಂಗೀತ ಸಭಾ ಸಂಘಟಿಸಲು ಮುಂದೆ ಬಂದಾಗ ದುಬಾರಿ ವೆಚ್ಚದ ಕಾರ್ಯಕ್ರಮಕ್ಕೆ ಮುಂಗಡ ಹಣವನ್ನು ಕೊಡಲು ಮುಂದೆ ಬಂದವರು ಆ ಸಭೆಯಲ್ಲಿ ಸೇರಿದ ಎಲ್ಲಾ ಮಂದಿಯಲ್ಲಿ ಶ್ರೀ ಪುಂಡಲೀಕ ಶೆಣೈಯವರೊಬ್ಬರೇ. ತಮ್ಮ ಮಾತಿನಂತೆ ಅವರು ನಡೆದರು. ಬ್ಯಾಂಕಿನಲ್ಲಿ ತಮ್ಮ ಶೇರುಗಳನ್ನು ಆಡವಿಟ್ಟು ಸಾಲವನ್ನು ಪಡೆದು ನಾಟಕ ಮಂಡಳಿಗೆ ಸಂಗೀತ ಸಭಾದ ವತಿಯಿಂದ ಮುಂಗಡ ಹಣವನ್ನು ಕೊಡಿಸಿದರು.

ಜಿಲ್ಲೆಯ ನಾಟಕ ರಂಗದಲ್ಲೇ ಶ್ರೀಮತಿ ಪಂಡರೀಬ್ಯಾಯವರ ಐದು ದಿನಗಳ ನಾಟಕಸರಣಿ ಇತಿಹಾಸವನ್ನು ನಿರ್ಮಿಸಿತು – ಅನೇಕ ಕಾರಣಗಳಿಂದ. ಪ್ರದರ್ಶನಗೊಂಡ ನಾಟಕಗಳು ಎರಡು ಮಾತ್ರ. ಶಾಂತಿ ನಿವಾಸ ಹಾಗೂ ಭಕ್ತ

Sri Vidyabharathi Book Centre, Sringeri

CC-0. In Public Domain. Digitized by eGangotri
ಮಿರಾ, ಉಡುಪಿಯ ವಿ.ಜೆ. ಯು ಕ್ಲಬ್‌ನ ಹೊಸಬರಂಗಕ್ಕೆಲ್ಲಿ ನಾಟಕ ಪ್ರದರ್ಶನ. ಮೊದಲದಿನದ ನಾಟಕ ಆರಂಭಗೊಳ್ಳುವ ಎರಡು ತಾಸು ಮೊದಲು – ಸಂಘಟಕರು ಟಿಕೇಟು ಕೌಂಟರನ್ನು ವ್ಯವಸ್ಥೆಮಾಡುವ ಮೊದಲೇ – ಸಮೀಪದ ಮೈನ್ ಶಾಲೆಯ ಕಬ್ಬಿಣದ ಕಟಕಟೆಯಿರುವ ಅಗಲ ಕಿರಿದಾದ ಜಗಲಿಯಲ್ಲಿ ಕುಕ್ಕುರುಗಾಲಿನಲ್ಲಿ ಕುಳಿತು ಶ್ರೀ ಪುಂಡಲೀಕ ಶೆಣೈಯವರು ಟಿಕೇಟು ಮಾರಾಟಕ್ಕೆ ತೊಡಗಿದ್ದರು. ಟಿಕೇಟುಕೊಳ್ಳಲು ಮಾತ್ರ ಮಂದಿಯಿಲ್ಲ. ಮೊದಲದಿನ ಸೋಲೇ ಸೋಲು. ಶ್ರೀ ಶೆಣೈಯವರು ತಮ್ಮ ಸಾಲದ ಹಣ ನೀರುಪಾಲಾಯಿತೆಂದು ತಿಳಿದರೋ ಏನೋ. ಎರಡನೆಯ ದಿನದ ನಾಟಕಕ್ಕೆ ಹೆಚ್ಚು ಮಂದಿ ಪ್ರೇಕ್ಷಕರು. ಶ್ರೀ ಶೆಣೈಯವರ ಬಾಡಿದ ಮುಖ ಸ್ವಲ್ಪವಷ್ಟೇ ಅರಳಿಕೊಂಡಿತು. ಮೂರನೆಯ ದಿನ ಭಕ್ತ ಮಿರಾ ನಾಟಕಕ್ಕೆ ವಿಪರೀತ ಜನಸಂದಣಿ. ಎಲ್ಲಾ ಟಿಕೇಟುಗಳು ಮಾರಾಟಗೊಂಡವು. ನಾಲ್ಕನೆಯ ದಿನದ ನಾಟಕದ ಜನಸಂದಣಿಯನ್ನು ನಿಯಂತ್ರಿಸುವುದು ಕಷ್ಟವಾಯಿತು. ಶ್ರೀ ಶೆಣೈಯವರ ಸಾಲದ ಹಣ ಮಾತ್ರವಲ್ಲದೆ ಎಲ್ಲಾ ನಾಟಕಗಳ ಸಂಭಾವನೆ ಹಾಗೂ ಖರ್ಚು ಕೂಡಾ ಅಂದಿನ ಟಿಕೇಟು ಮಾರಾಟದಿಂದ ಸರಿಹೊಂದಿಹೋಯಿತು. ಕೊನೆಯ ದಿನದ ನಾಟಕದ ಟಿಕೇಟು ಮಾರಾಟದ ಹಣದ ಮೊತ್ತ, ನೂರಾರು ನಾಟಕ ಪ್ರದರ್ಶನಗಳನ್ನು ನೀಡಿದ ಶ್ರೀಮತಿ ಪಂಡರೀಬ್ಯಾಯವರ ಯಾವುದೇ ನಾಟಕದ ಟಿಕೇಟು ಮಾರಾಟದ ದಾಖಲೆಯನ್ನು ಮುರಿದು ಸಂಗೀತ ಸಭಾಕ್ಕೆ ಮೊದಲ ಬಾರಿಗೆ ಮಿಗತೆ ಹಣವನ್ನು ದೊರಕಿಸಿಕೊಟ್ಟಿತು. ಶ್ರೀ ಪುಂಡಲೀಕ ಶೆಣೈಯವರಲ್ಲಿ ಸಾರ್ಥಕ್ಯ ಭಾವ ಮೂಡಿಬಂತು.

ಮುಂದಿನ ವರ್ಷ – 1967ರಲ್ಲಿ – ಸಂಗೀತ ಸಭಾ ಮಾಸ್ಟರ್ ಹಿರಣ್ಣಯ್ಯನವರ ಮಿತ್ರ ಮಂಡಳಿಯ ಏಳು ದಿನಗಳ ಅವಧಿಯ ನಾಟಕಗಳನ್ನು ಸಂಘಟಿಸಲು ಯೋಚಿಸುತ್ತಿದ್ದಾಗ ಶ್ರೀ ಪುಂಡಲೀಕ ಶೆಣೈಯವರು ಯಾಕೋ ಏನೋ ಆತಂಕ ಪಟ್ಟಂತೆ ಕಾಣಿಸಿದರು. ಸಭಾದ ಕೋಶಾಧಿಕಾರಿ ಶ್ರೀ ಮನೋಹರ ಪ್ರಭುಗಳೊಡನೆ ''ಸಂಗೀತ ಸಭಾ ಇನ್ನೂ ಇನ್ನೂ ನಾಟಕಗಳನ್ನು ಪ್ರದರ್ಶಿಸಬೇಕೇ ? ಸಂಗೀತ, ನೃತ್ಯ ಕಚೇರಿಗಳನ್ನಷ್ಟೇ ನಡೆಸಿದರೆ ಸಾಲದೇ ?'' ಎಂದು ಕೇಳಿದರು. ಥಟ್ಟನೆ ಶ್ರೀ ಪ್ರಭುಗಳು ಉತ್ತರಿಸಿದರು: ''ಮಾಸ್ಟ್ರೇ, ವಿಜಯನಾಥನಿಗೆ ಒಂದು ಹಟ. ಸಂಗೀತ ಸಭಾ ಹುಟ್ಟುವ ಒಂದೆರಡು ವರ್ಷಗಳ ಮೊದಲು ಮಾಸ್ಟರ್ ಹಿರಣ್ಣಯ್ಯನವರು ತಮ್ಮ ಮಂಡಳಿಯೊಂದಿಗೆ ಉಡುಪಿಗೆ ಬಂದು ಸ್ವಂತ ನೆಲೆಯಲ್ಲಿ ವರದೇಂದ್ರ ಕಲಾಮಂದಿರದಲ್ಲಿ ಕನಿಷ್ಠ ಒಂದು ವಾರ ನಾಟಕಗಳನ್ನಾಡಲು ಯೋಚಿಸಿ, ಎರಡೇ ನಾಟಕಗಳನ್ನು ಪ್ರೇಕ್ಷಕರೇ ಇಲ್ಲದ ಮಂದಿರದಲ್ಲಿ ಪ್ರದರ್ಶಿಸಿ ಕೈಸುಟ್ಟುಕೊಂಡಾಗ

Sri Vidyabharathi Book Centre, Sringeri

CC-0. In Public Domain. Digitized by eGangotri
ಉಡುಪಿಯ ಮೊದಲಿಗೆ ಕಲಿಯ ಗಂಭೀರ ಪ್ರಶ್ನೆಯನ್ನು ಮೇಲೆ ನಿಂತು ಸಾರಿ ಹೇಳಿದ್ದರು. ಅವರ ಅಂದಿನ ನೋವಿಗೆ ಅರ್ಥವಿದೆ. ಆದರೆ ಇಂದು ಉಡುಪಿಯ ಪರಿಸ್ಥಿತಿ ಹಾಗಿಲ್ಲ, ಸಂಗೀತ ಸಭಾದಂತಹ ಕಲಾ ಸಂಘಟನೆಯ ಮೂಲಕ ಯಾವ ವಾತಾವರಣವನ್ನು ಊರಲ್ಲಿ ಉಂಟುಮಾಡಲು ಸಾಧ್ಯ ಎಂದು ಮಾಸ್ಟರ್ ಹಿರಣ್ಣಯ್ಯನವರಿಗೆ ತೋರಿಸಿ, ಉಡುಪಿಯ ಜನರ ಬಗೆಗಿನ ತಮ್ಮ ಅಭಿಪ್ರಾಯವನ್ನು ಅವರು ತಿದ್ದಿಕೊಳ್ಳುವಂತಾಗಲು ಇದೀಗ ಅವರ ನಾಟಕಗಳನ್ನು ಆಡಿಸುವ ಹಟದಿಂದ ಹಲವು ಕಾಲದಿಂದ ವಿಜಯನಾಥ ಅವರಿಗೆ ಸತತವಾಗಿ ಪತ್ರ ಬರೆದು ಕೇಳುತ್ತಲೇ ಇದ್ದ. ಕೊನೆಗೂ ಆತನ ಛಲಕ್ಕೆ ಮಾಸ್ಟರ್ ಹಿರಣ್ಣಯ್ಯನವರು ಮಣಿದು ಒಂದು ವಾರ ನಾಟಕವಾಡಲು ಒಪ್ಪಿಕೊಂಡಿದ್ದಾರೆ. ಈ ಬಾರಿ ಅವರ ನಾಟಕ ಸೋಲುವುದಿಲ್ಲ.'' 1960ರಲ್ಲಿ ನಡೆದ ಕಹಿ ಘಟನೆ ಶ್ರೀ ಪುಂಡಲೀಕ ಶೆಣೈಯವರ ಮನಃಪಟಲದಲ್ಲಿ ಆಗ ಮೂಡಿಬಂದಿರಬೇಕು. ಸಂಗೀತ ಸಭಾದ ನಿಲುವನ್ನು ಪ್ರಾಯಶಃ ಮೆಚ್ಚಿದ ಅವರು ಮುಗುಳುನಕ್ಕರಂತೆ. ಏಳು ದಿನಗಳ ನಾಟಕೋತ್ಸವ ನಿರೀಕ್ಷೆಯಂತೆ ಯಶಸ್ಸು ಪಡೆದು ಮಾಸ್ಟರ್ ಹಿರಣ್ಣಯ್ಯನವರಿಂದ ಉಡುಪಿಯ ಕಲಾಪ್ರೇಮಿಗಳಿಗೆ ಮುಕ್ತಕಂಠದ ಪ್ರಶಂಸೆ ದೊರಕಿತು. ಇದರಿಂದ ಶ್ರೀ ಪುಂಡಲೀಕ ಶೆಣೈಯವರು ಪಟ್ಟ ಸಂತೋಷ ಅಷ್ಟಿಷ್ಟಲ್ಲ.

ಮತ್ತೆ ಎರಡನೆಯ ಬಾರಿಗೆ – 1970ರಲ್ಲಿ – ಮಾಸ್ಟರ್ ಹಿರಣಯ್ಯನವರ ಮಿತ್ರಮಂಡಳಿಯ ನಾಟಕಗಳನ್ನು ಸಂಗೀತ ಸಭಾ ಸಾದರಪಡಿಸಿತು. ನಾಟಕ ಸರಣಿ ಮುಗಿದ ಮಾರನೆಯ ದಿನದ ನಾಟಕವನ್ನು, ಶ್ರೀ ಪುಂಡಲೀಕ ಶೆಣೈಯವರ ಮೇಲಿನ ಅಭಿಮಾನದಿಂದ, ಅವರು ಸಕ್ರಿಯರಾಗಿದ್ದ 'ರಂಗಭೂಮಿ' ಸಂಸ್ಥೆ ಪ್ರದರ್ಶಿಸಲು ಮುಂದೆ ಬಂದಾಗ, ಅವರಿಂದ ಸಂಗೀತ ಸಭಾ ತನ್ನ ಪಾಲಿನ ಯಾವುದೇ ಖರ್ಚನ್ನು ಅಪೇಕ್ಷಿಸದೆ ಸಂತೋಷದಿಂದ ಅವಕಾಶವನ್ನು ಒದಗಿಸಿತು. ●

Sri Vidyabharathi Book Centre, Sringeri

CC-0. In Public Domain. Digitized by eGangotri

ಪುಂಡಲೀಕ ಶೆಣೈ ನಿಧನ

ಉಡುಪಿ, ಡಿ. 21: ಶಿಕ್ಷಣ ತಪಸ್ವಿಯು, ವುಂಡಲೀಕ ಶೆಣೈ ಅವರು ಇಂದು – ಎಳ್ಳಮವಾಸ್ಯೆಯ ದರ್ವದಂದು – ರಾತ್ರೆ ಎಂಟು ಗಂಟೆಗೆ ದಿವಂಗತರಾದರು.

ನಿಸ್ವಾರ್ಥ ಭಾವನೆಯಿಂದ ಸಾವಿರಾರು ಮಂದಿಗೆ ವಿದ್ಯಾದಾನ ಮಾಡಿ ಆದರ್ಶ ಗುರುಗಳೆನಿಸಿದ ಶ್ರೀ ಶೆಣೈ 80 ವರ್ಷಗಳ ಸಾರ್ಥಕ ಜೀವನವನ್ನು ಬಾಳಿ ಬದುಕಿನ ಕೊನೆಯ ಕ್ಷಣಗಳ ವರೆಗೂ ಶಿಕ್ಷಣ ಮತ್ತು ಜನತಾ ಸೇವೆಗೇ ಮೀಸಲಿಟ್ಟ ಜೀವನವನ್ನು ಸವೆಸಿ ಮಣಿಸಿ ಸಮೃದ್ಧಗೊಳಿಸಿದ್ದರು. ಅವರು ಉಡುಪಿಯ ಕ್ರಿಶ್ಚಿಯನ್ ಹೈಸ್ಕೂಲಿನ ವಿದ್ಯಾರ್ಥಿಯಾಗಿದ್ದು ನಂತರ ಮದ್ರಾಸ್ ವಿಶ್ವವಿದ್ಯಾನಿಲಯದಲ್ಲಿ ಬಿ. ಎ. ಹಾಗೂ ಎಲ್.ಟಿ. ಪದವಿಗಳನ್ನು ಪಡೆದು ಕ್ರಿಶ್ಚಿಯನ್ ಹೈಸ್ಕೂಲಿನಲ್ಲಿಯೆ ಸುಮಾರು 30 ವರ್ಷಗಳ ಕಾಲ ಸಹಾಯಕ ಅಧ್ಯಾಪಕರಾಗಿ ಸೇವೆ ಸಲ್ಲಿಸಿದ್ದರು. ನಂತರ ಮಣಿಪಾಲ ಹೈಸ್ಕೂಲಿನಲ್ಲಿ ನಾಲ್ಕು ವರ್ಷಗಳ ಕಾಲ ಮುಖ್ಯೋಪಾಧ್ಯಾಯರಾಗಿ ಸೇವೆ ಸಲ್ಲಿಸಿದ್ದರು. ಮದ್ರಾಸ್ ವಿಶ್ವವಿದ್ಯಾನಿಲಯದ ಮ್ಯಾಟ್ರಿಕ್ ಪರೀಕ್ಷೆಯನ್ನು ಕೂಡಲು ಅನುಕೂಲವಾಗುವಂತೆ ಕೆಲಕಾಲ ಒಂದು ರಾತ್ರಿ ಶಾಲೆಯನ್ನೂ ನಡೆಸಿ, ಅನೇಕರಿಗೆ ವಿದ್ಯಾದಾನ ಮಾಡಿದ್ದರು.

ಅವರ ಮನೆಯೆ ಒಂದು ಗುರುಕುಲ. ಅಂದಿನಿಂದ ಇಂದಿನವರೆಗೂ ಪ್ರತಿದಿನ ಹಲವಾರು ವಿದ್ಯಾರ್ಥಿಗಳಿಗೆ ಅವರು ಇಂಗ್ಲಿಷ್ ಮತ್ತು ಗಣಿತಗಳಲ್ಲಿ ಉಚಿತವಾಗಿ ಶಿಕ್ಷಣ ನೀಡುತ್ತಿದ್ದರಲ್ಲದೆ ಬಡ ವಿದ್ಯಾರ್ಥಿಗಳಿಗೆ ಆರ್ಥಿಕ ಸಹಾಯವನ್ನು ಸಲ್ಲಿಸುತ್ತಿದ್ದರು. ಸೇವಾ ಸಮಾಜ ಎಂಬ ಮೇದಿಕೆಯೊಂದನ್ನು ಸ್ಥಾಪಿಸಿ ಬಡವಿದ್ಯಾರ್ಥಿಗಳಿಗೆ ಪುಸ್ತಕಗಳನ್ನು ಒದವಿಸುತ್ತಿದ್ದು ಅನೇಕರು ಇದರಿಂದ ಪ್ರಯೋಜನ ಪಡೆದಿದ್ದಾರೆ.

ಇಂಗ್ಲಿಷ್ ಮತ್ತು ಕನ್ನಡಗಳೆರಡರಲ್ಲೂ ಪ್ರಭುತ್ವ ಪಡೆದಿದ್ದ ಶ್ರೀ ಶೆಣೈ ಉತ್ತಮ ಕಲಾಭಿಮಾನಿಗಳೂ ವಿಮರ್ಶಕರೂ ಆಗಿದ್ದರು. ಉಡುಪಿಯ ಶ್ರೀ ರಾಮಕೃಷ್ಣ ಥಿಯೇಟರಿನ ಸ್ಥಾಪಕ ಡೈರೆಕ್ಟರ್ ಆಗಿ, ರಂಗಭೂಮಿಯ ಉದ್ಧಾರಕ್ಕಾಗಿ, ಮಣಿಪಾಲದ ಏಕಾಡೆಮಿ ಆಫ್ ಜನರಲ್ ಎಜುಕೇಶನ್‌ನ ಕಾರ್ಯ ಸಮಿತಿಯ ಸದಸ್ಯರಾಗಿ, ಕ್ರಿಶ್ಚಿಯನ್ ಹೈಸ್ಕೂಲ್ ಬೆನಿಫಿಟ್ ಟ್ರಸ್ಟ್ ಫಂಡಿನ ಕಾರ್ಯದರ್ಶಿಯಾಗಿ-ಟೀಗೆ ನಾನಾ ರಂಗಗಳಲ್ಲಿ ಅವರು ನಿಸ್ಪೃಹತೆಯಿಂದ ಸೇವೆ ಸಲ್ಲಿಸುತ್ತಿದ್ದರು.

ಇಂಗ್ಲಿಷ್ ಕನ್ನಡ ಬೋಧಿನಿ, ಹ್ಯಾಂಡ್ ಬುಕ್ ಆಫ್ ಇಂಗ್ಲಿಷ್ ಗ್ರಾಮರ್ ಮೊದಲಾದ ಪುಸ್ತಕಗಳನ್ನು ಬರೆದಿರುವರಲ್ಲದೆ ಹಲವು ಪತ್ರ ಪುಸ್ತಕಗಳ ರಚನೆಯಲ್ಲೂ ಸಹಕರಿಸಿದ್ದರು.

ಅವರೊಬ್ಬ ತುಂಬಿದ ಕೊಡ. ಆದರ್ಶ ಸ್ವಯಂ ಬ್ರಹ್ಮಚಾರಿಯಾಗಿದ್ದು ಕೊಂಡು 'ವಸುಧೈವ ಕುಟುಂಬಕಂ' ಎಂಬ ಭಾವನೆಯಿಂದ ಎಲ್ಲರಿಗೂ ಸಾಧ್ಯವಾದ ರೀತಿಯಲ್ಲಿ ಉಪಕಾರವನ್ನು ಮಾಡಿ ಎಲ್ಲರಿಂದಲೂ ಮನ್ನಣೆಗಳಿಸಿದ್ದರು.

ಅವರ ಬದುಕಿನಲ್ಲಿ ಎಲ್ಲವೂ ಶಿಸ್ತುಬದ್ಧ. ದಿನಚರಿಯ ಯಾವ ಕೆಲಸಗಳಿಗೂ ಲೋಪವಿಲ್ಲ. ಹಾಳು ಹರಟೆಗಳಲ್ಲಿ ಕಾಲ ಕಳೆಯದೆ ಜನರ ಉಪಯೋಗಕ್ಕಾಗಿಯೆ ಎಲ್ಲ ಕ್ಷಣಗಳ ವಿನಿಯೋಗ. ಇಂದು ಕೂಡ ಅವರು ಸಂಜೆ 7.30ಕ್ಕೆ ಎಂದಿನಂತೆ ವಸತಿಯಿಂದ ವೇಗವಾಗಿ ಬಂದು ಮರಳುವಾಗಲೆ ಹಾದಿಬದಿಯನ್ನು ಸೇರಿದರು.

ಅವರ ನಿಧನವಾರ್ತೆ ಕ್ಷಣಾರ್ಧದಲ್ಲಿ ನಗರದಲ್ಲಿ ಹಬ್ಬಿ ಆವಾರ ಅಭಿಮಾನಿಗಳೂ ಶಿಷ್ಯರೂ ನಿವಾಸದತ್ತ ಧಾವಿಸಿ ಅವನಿಗೆ ತಮ್ಮ ಚರಮಾಂಜಲಿ ಅರ್ಪಿಸಿದರು.

ಇಂದು ಅಂತ್ಯ ಸಂಸ್ಕಾರ

ಅನೇಕ ಅಭಿಮಾನಿಗಳಿಗೆ ಅಂತ್ಯ ದರ್ಶನಕ್ಕೆ ಅನುಕೂಲವಾಗುವಂತೆ ಕಳೇಬರವನ್ನು ನಾಳೆ (ಬುಧವಾರ) ಮಧ್ಯಾಹ್ನ 11 ಗಂಟೆಯ ವರೆಗೆ ಇಂಡಿಯ ನಂತರ ಅಂತ್ಯ ಸಂಸ್ಕಾರ ಜರುಗಲಿದೆಯೆಂದು ತಿಳಿದು ಬಂದಿದೆ.

(ಒಂದನೇ ಪುಟದಿಂದ)

ಸ್ಥಳೀಯ ಖ್ಯಾತ ವೈದ್ಯ 'ಉದಯವಾಣಿ' (22-12-1976)ಯಲ್ಲಿ ಪ್ರಕಟಗೊಂಡ ಶ್ರೀ ಯು. ಪುಂಡಲೀಕ ಶೆಣೈಯವರ ನಿಧನದ ವಾರ್ತೆ

CC-0. Vidyabharathi Research Centre, Sringeri

CC-O. In Public Domain. Digitized by eGangotri

ಸೇವಾ ಧರ್ಮ

– ಡಾ। ಎಚ್. ವಿ. ನರಸಿಂಹಮೂರ್ತಿ
ಪ್ರಾಧ್ಯಾಪಕರು, ಭಂಡಾರ್‌ಕಾರ್ಸ್ ಕಾಲೇಜು, ಕುಂದಾಪುರ – 576 201

'ಸೇವಾಧರ್ಮಃ ಪರಮಗಹನಃ' ಎಂದಿದ್ದಾನೆ, ಸುಭಾಷಿತಕಾರ ಭರ್ತೃಹರಿ. 'ಸೇವೆ' ಎಂಬುದು ಪವಿತ್ರ ಪದ; ಪರಿಶುದ್ಧ ಪದವಿ. ಗಾಂಧೀಜಿಯವರಂತಹ ಆದರ್ಶ ವ್ಯಕ್ತಿಗಳ ಕಾಲದಲ್ಲಿ ಈ ಪದಕ್ಕಿದ್ದ ಮಹತ್ತ್ವ ಈಗಿಲ್ಲ. ಇತ್ತೀಚಿನ ದಿನಗಳಲ್ಲಿ ಇದಕ್ಕೆ ಹೇಗೆ ಕೊಳೆ ಮುತ್ತುತ್ತಿದೆ, ತುಕ್ಕು ಹಿಡಿಯುತ್ತಿದೆ, ಸವಕಲಾಗುತ್ತಿದೆ – ಎಂಬುದನ್ನು ಹೇಳದಿರುವುದೇ ಮೇಲು.

ಸೇವೆ-ಸೇವಕ ಎಂಬ ಪದಗಳನ್ನು ಸಮಾಜದ ವಿವಿಧ ಕ್ಷೇತ್ರಗಳಲ್ಲಿ ಬಳಸುತ್ತಿದ್ದೇವೆ. ಸರಕಾರದ ಕ್ಷೇತ್ರವಂತೂ ಸೇವಾಕ್ಷೇತ್ರ; ಸಮಾಜದ ಅನೇಕ ವ್ಯವಸ್ಥಿತ ವಿಭಾಗಗಳಲ್ಲಿಯೂ ಸೇವೆಯ ನಿರ್ವಹಣೆ ಇದೆ. ವೈದ್ಯ, ಉಪಾಧ್ಯಾಯ, ಗುಮಾಸ್ತ, ಸಚಿವ, ಶಾಸಕ – ಇವರೆಲ್ಲ ತಮಗೆ ಗೊತ್ತುಮಾಡಿದ ಕೆಲಸದಲ್ಲಿ ಶ್ರಮಿಸುವುದು ತಮ್ಮ ಸ್ವಂತ ಕೆಲಸದ ನಿಮಿತ್ತವಲ್ಲ; ಇತರರಿಗಾಗಿ. ಹೀಗೆ ಕೂಲಿ-ಸಂಭಾವನೆ-ಸಂಬಳ ತೆಗೆದುಕೊಳ್ಳಲು ಮಾಡುವ ಯಾವ ಕೆಲಸಗಳೇ ಆಗಲಿ ಅವು ಸ್ವಂತ ಕೆಲಸಗಳಲ್ಲ; ಸಂಸ್ಥೆಗೆ-ಸರಕಾರಕ್ಕೆ-ಸಮಾಜಕ್ಕೆ ಸಲ್ಲಿಸುವ ಸೇವೆ; ಇವುಗಳ ಉನ್ನತಿಗಾಗಿ ಪಡುವ ಶ್ರಮ.

ಹೀಗೆ ಸೇವೆ ಸಲ್ಲಿಸುವಾಗ ಕರ್ತವ್ಯ ಲೋಪವಾಗದಂತೆ, ಪ್ರಾಮಾಣಿಕವಾಗಿ, ನಿಷ್ಠೆಯಿಂದ ಶ್ರಮಿಸಬೇಕು. ನಾನು ಮಾಡುವ ಸೇವೆ ಒಂದು ಪವಿತ್ರಕಾಯಕ – ಎಂಬ ಭಾವನೆ ಬೇಕು. ಎಲ್ಲ ಕೆಲಸಗಳೂ ಕಾಯಕವಾಗಲಾರವು. ನಿಸ್ವಾರ್ಥತೆಯ, ಪರೋಪಕಾರದ, ಪ್ರಾಮಾಣಿಕತೆಯ, ದೇವರು ಒಪ್ಪುವ ಕೆಲಸ ಮಾತ್ರ ಕಾಯಕವಾದೀತು. 'ಕಾಯಕವೇ ಕೈಲಾಸ' ಎಂಬಂತೆ ಇಂತಹ ಪವಿತ್ರ ಭಾವನೆಗಳ ಹಿನ್ನೆಲೆಯಲ್ಲಿ ಮೂಡಿಬಂದ ಸೇವೆಯೇ ನಿಜವಾದ ಸೇವೆ.

ನದಿಗಳು ಹರಿಯುತ್ತವೆ; ಗಿಡ-ಮರಗಳು ಹಣ್ಣು ಕೊಡುತ್ತವೆ; ಸೂರ್ಯ-ಚಂದ್ರರು ಲೋಕವನ್ನು ಬೆಳಗುತ್ತಾರೆ. ಇವರದು ನಿಜವಾದ ಸೇವೆ; ಲೋಕೋತ್ತರವಾದ ಕಾಯಕ. ಇಲ್ಲಿ ಸ್ವಾರ್ಥತೆಯ ಲೇಪವಿಲ್ಲ; ಪ್ರಚಾರದ

Sri Vidyabharathi Book Centre, Sringeri

CC-O. In Public Domain. Digitized by eGangotri
ಅಬ್ಬರವಿಲ್ಲ, ಕನ್ನಡದ ದಾರ್ಶನಿಕ ಕವಿ ಡಿ. ವಿ. ಜಿ. ಯವರು ಹೇಳುತ್ತಾರೆ:

ಇಳೆಯಿಂದ ಮೊಳಕೆಯೊಗೆವಂದು ತಮಟೆಗಳಿಲ್ಲ ।
ಫಲಮಾಗುವಂದು ತುತ್ತುರಿಯ ದನಿ ಇಲ್ಲ,
ಬೆಳಕೀವ ಸೂರ್ಯ-ಚಂದ್ರರದೊಂದು ಸದ್ದಿಲ್ಲ
ಹೊಲಿ ನಿನ್ನ ತುಟಿಗಳನು - ಮಂಕುತಿಮ್ಮ ॥

ಅವರಂದಂತೆ ಸೇವೆ ಕೇವಲ ಪ್ರಚಾರದ ಸಾಧನವಾಗಬಾರದು. ತುಟಿಬಿಚ್ಚದೆ, ತಲೆಬಾಗಿ, ನಮ್ರತೆಯಿಂದ, ಕರ್ತವ್ಯಭಾವನೆಯಿಂದ ಸೇವೆ ಸಲ್ಲಿಸಬೇಕು.

ಸೇವೆ ಸಲ್ಲಿಸಲು ಪ್ರಾಮಾಣಿಕತೆ, ಉದಾರತೆ, ತ್ಯಾಗ, ಧರ್ಮಶ್ರದ್ಧೆಗಳು ತೀರ ಆಗತ್ಯ. ಪ್ರತಿಫಲ ಅಥವಾ ಸಂಭಾವನೆ ತೆಗೆದುಕೊಂಡರೂ ಅನೇಕರು ಮಾಡುವ ಕೆಲಸಗಳಲ್ಲಿ ಕರ್ತವ್ಯಲೋಪ ಮಾಡುತ್ತಾರೆ; ನಿರ್ದಿಷ್ಟಗುರಿ ಸಾಧಿಸುವುದಿಲ್ಲ. ಭ್ರಷ್ಟಾಚಾರ ನಡೆಸುತ್ತಾ ದುಷ್ಟತನದಿಂದ ವರ್ತಿಸುವುದು, ಇತರರಿಗೆ ಕಿರುಕುಳ ಕೊಡುತ್ತಾ ಅದರಲ್ಲೇ ಸಂತೋಷ ಕಾಣುವುದು ಸೇವೆಯ ಗುಣಧರ್ಮವಲ್ಲ. ಇತರರಿಗೆ ಹಿಂಸೆಯಾಗದಂತೆ, ಸತ್ಯ-ಧರ್ಮಗಳಿಗೆ ವಿರೋಧವಾಗದಂತೆ, ನ್ಯಾಯ-ನಿಷ್ಠೆಗಳ ತೂಕ ತಪ್ಪದಂತೆ ಶ್ರಮಿಸಬೇಕು. ಸಹಕಾರಿ ರಂಗದಲ್ಲಿ, ರಾಜಕೀಯ ಕ್ಷೇತ್ರದಲ್ಲಿ, ಸಹಕಾರಿ ವ್ಯಾಪ್ತಿಯಲ್ಲಿ, ಸಾಮಾಜಿಕ-ಧಾರ್ಮಿಕ ನೆಲೆಯಲ್ಲಿ ಎಷ್ಟೆಷ್ಟೋ ಉತ್ತಮವಾದ ಸೇವೆ ಸಲ್ಲಿಸಲು ನೂರಾರು ಸದವಕಾಶಗಳಿವೆ.

ಇದೆಲ್ಲ ನಿಜ. ಆದರೆ ಅನೇಕರಿಗೆ ಇದರ ಪೂರ್ಣದೃಷ್ಟಿಯ ಅರಿವಿಲ್ಲ. ಆಯಾ ಕ್ಷೇತ್ರದ ಒಳಿತನ್ನು ಸಾಧಿಸದೆ, ಕೇವಲ ಸ್ವಾರ್ಥಕ್ಕಾಗಿ ಈ ಕ್ಷೇತ್ರಗಳನ್ನು ದುರುಪಯೋಗಪಡಿಸುವ ಮಂದಿಗಳ ಸಂಖ್ಯೆಯೇ ಹೆಚ್ಚು. ಇದು ಸಮಾಜದ ಋಣ ತೀರಿಸಲು ತನಗೆ ಲಭಿಸಿದ ಉತ್ತಮ ಅವಕಾಶ ಎಂದು ಭಾವಿಸುವ ಜನ ತೀರ ಕಡಿಮೆ. ಶಂಕರ-ಬುದ್ಧ-ಗಾಂಧೀ ಮೊದಲಾದ ಮಹಾತ್ಮರು ಸಮಾಜದ ಉನ್ನತಿಗಾಗಿ ಬಹಳಷ್ಟು ಶ್ರಮಿಸಿದ್ದಾರೆ. ತಾನು-ತನ್ನದು ಎಂಬ ಅಹಂಕಾರ-ಮಮಕಾರಗಳನ್ನು ನೀಗಿ ಲೋಕೋನ್ನತಿಗಾಗಿಯೇ ಶ್ರಮಿಸಿ, ತಮ್ಮ ಬಾಳನ್ನು ಇವರು ಸಮರ್ಪಿಸಿದ್ದಾರೆ. ಇಂಥಹವರ ಬದುಕು ಸೇವೆಯಿಂದ ಸಾರ್ಥಕವಾದ ಬದುಕು; ಮಾಗಿದ ಜೀವನ.

ಉಪಾಧ್ಯಾಯ ಕೇವಲ ಉಪಾಧ್ಯಾಯನೆನಿಸದೆ ಸಮಾಜದ ಶಿಲ್ಪಿಯಾಗಿ ಕೆಲಸ ನಿರ್ವಹಿಸುವುದರಲ್ಲಿ ಆತನ ಸೇವೆ ಇದೆ; ರಾಜಕೀಯ ರಂಗದ ಪ್ರತಿನಿಧಿ ಜನತೆಯ ಕಷ್ಟ-ಕಾರ್ಪಣ್ಯ-ಅಹವಾಲುಗಳಿಗೆ ತನ್ನ ಕಣ್ಣು-ಕಿವಿಗಳನ್ನೊಡ್ಡಿ, ಅವನ್ನು ಪರಿಹರಿಸುವ ಕಳಕಳಿಯ ಪ್ರಾಮಾಣಿಕ ಪ್ರಯತ್ನ ಮಾಡುವಲ್ಲಿ ಆತನ ಸೇವೆ ಇದೆ.

Sri Vidyabharathi Book Centre, Sringeri

CC-0. In Public Domain. Digitized by eGangotri

ವೈದ್ಯನು ಯಮಕಾಣಿಸಿ ಸಹೋದರನಂತೆ ರೋಗ-ರುಜಿನಗಳ ನಿವಾರಣೆಯ ಕುರಿತು ಶ್ರದ್ಧೆಯಿಂದ ಶ್ರಮಿಸುವುದರಲ್ಲಿ ಆತನ ಸೇವೆ ಇದೆ; ಹೀಗೆ ಯಾವುದೇ ವೃತ್ತಿಯನ್ನು ಅನುಸರಿಸಿದರೂ ಇದು ಜನಸೇವೆಯ ಪವಿತ್ರ ಕೆಲಸ; ಸಮಾಜದ ಋಣ ತೀರಿಸುವ ಹೊಣೆಗಾರಿಕೆ ಎಂಬ ಮನೋಭಾವದಿಂದ ಪ್ರಾಮಾಣಿಕವಾಗಿ, ಕ್ಷಣ-ಕ್ಷಣದಲ್ಲೂ ಎಚ್ಚರದಿಂದ ಸೇವೆ ಸಲ್ಲಿಸಬೇಕು. ಇಂತಹ ಸೇವೆ ನಿಜಕ್ಕೂ ಜನಾರ್ದನನ ಸೇವೆ; ಅದೊಂದು ತಪಸ್ಸು; ಪರಮಧರ್ಮ. ಕೈಲಾಸವನ್ನು ಕಾಣುವ ಕಾಯಕ; ಭಗವಂತನ ಆರಾಧನೆ.

Most bitter word	–	Alone
Most revered	–	Mother
Most final	–	Death
Most beautiful	–	Love
Most cruel	–	Revenge
Most peaceful	–	Tranquil
Saddest	–	Forgotten
Warmest	–	Friendship
Coldest	–	No
Most comforting	–	Faith

CC-0. In Public Domain. Digitized by eGangotri

Sri Vidyabharathi Book Centre, Sringeri

CC-O. In Public Domain. Digitized by eGangotri

Sri Vidyabharathi Book Centre, Sringeri

CC-O. In Public Domain. Digitized by eGangotri

Sri Vidyabharathi Book Centre, Sringeri